MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 72 | ಶನಿವಾರ : 03-01-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 72 | SATURDAY : 03-01-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ವಿವಿಧ ಇಲಾಖೆಗೆ ಲೋಕಾಯುಕ್ತರ ಚುರುಕಿನ ಕಾರ್ಯಚರಣೆ

ಯುವಮಾರ್ಗ ಸುದ್ದಿ



**ಲಿಂಗಸುಗೂರು,ಜ.2–** ವಿವಿಧ ಸರ್ಕಾರಿ ಕಛೇರಿಗಳಿಗೆ ದಿಢೀರ್ ಭೇಟಿ ನೀಡಿ ದಾಖಲೆ ಪರಿಶೀಲಿಸಿದ ಲೋಕಾಯುಕ್ತ ಅಧಿಕಾರಿಗಳು ಹಲವು ಕರ್ತವ್ಯ ಲೋಪಗಳನ್ನು ಗುರುತಿದ್ದಾರೆ.

ಪಟ್ಟಣದ ತಹಶೀಲ್ದಾರರ ಕಛೇರಿ ಸೇರಿದಂತೆ ವಿವಿಧ ಕಛೇರಿಗಳ ಮೇಲೆ ಲೋಕಾ ಯುಕ್ತ ಅಧಿಕಾರಿಗಳ ತಂಡ ದಾಳಿ ದಾಖಲೆಗಳನ್ನು ಪರಿಶೀಲನೆ ನಡೆಸಿದರು. ಪಟ್ಟಣದ ಮಿನಿ ವಿಧಾನ ಸೌಧದಲ್ಲಿರುವ ತಹಶೀ ಲ್ದಾರ ಕಛೇರಿ, ಉಪ ನೋಂದಾಣಿ ಅಧಿಕಾರಿಗಳ ಕಛೇರಿ ಹಾಗೂ ಪುರಸಭೆ ಕಾರ್ಯಾಲಯದ ಮೇಲೆ ಲೋಕಾಯು ಕ್ತರು ದಾಳಿ ಮಾಡಿ ಕಡತಗಳ ಪರಿಶೀಲನೆ ನಡೆಸುತ್ತಿದ್ದಾರೆ. ಈ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹಾಗೂ ಲಂಚದ ಆರೋಪಗಳು ಕೇಳಿ ಬಂದ ಹಿನ್ನಲೆಯಲ್ಲಿ ಕಛೇರಿಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲನೆ ಮಾಡಲಾಗುತ್ತಿದ್ದು, ಹಣಕಾಸಿನ ವ್ಯವಹಾರ ಇತ್ಯಾದಿಗಳನ್ನು ಪರಿಶೀಲಿಸಿ ಅವ್ಯವಹಾರ ಕಂಡು ಬಂದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ನ್ಯಾಯಾಧೀಶ ಎ.ವಿ ಪಾಟೀಲ್ ತಿಳಿಸಿದರು.

## ಕೋಗಿಲು ಒತ್ತುವರಿ ತೆರವು, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ಸೇರಿ ಹಲವು ವಿಷಯ ಸಂಪುಟದಲ್ಲಿ ಚರ್ಚೆ

**ಬೆಂಗಳೂರು, ಜ.3–** ಕೋಗಿಲು ಕ್ರಾಸ್ ಬಳಿಯ ಒತ್ತುವರಿ ತೆರವು ಹಾಗೂ ಅನಂತರದ ಪುನರ್ ವಸತಿ ಯೋಜನೆಗಳು, ಲೋಕಾಯುಕ್ತ ಕಾಯ್ದೆಯ ತಿದ್ದುಪಡಿ, ಉದ್ಯೋಗ ಖಾತ್ರಿ ಯೋಜನೆ ಹೆಸರು ಬದಲಾವಣೆ ಸೇರಿದಂತೆ ಹಲವಾರು ಮಹತ್ವದ ವಿಚಾರಗಳನ್ನು ಇಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ.

ವರ್ಷದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಸುಮಾರು 30ಕ್ಕೂ ಹೆಚ್ಚು ವಿಷಯಗಳನ್ನು ಚರ್ಚಿಸುವ ಸಾಧ್ಯತೆ ಇದೆ. ಎಂದಿನಂತೆ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕಾಗಿ ಆರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿವೇಶನ ಮಂಜೂರಾತಿ ವಿಚಾರವು ಸಭೆಯ ಕಾರ್ಯಸೂಚಿಯಲ್ಲಿ ಅಡಕವಾಗಿದೆ ಎಂದರು.



2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಸ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಸಿಐಡಿ ಸಲ್ಲಿಸಿದ ವರದಿಯ ಆಧಾರದ ಮೇಲೆ, ಕರ್ನಾಟಕ ಲೋಕಸೇವಾ ಆಯೋಗದ ಹಿಂದಿನ ಕಾರ್ಯದರ್ಶಿ ನಿವೃತ್ತ ಐಎಎಸ್ ಅಧಿಕಾರಿ ಕೆ.ಆರ್.ಸುಂದರ್ ವಿರುದ್ಧ ಪ್ರಾರಂಭಿಸಲಾದ ಇಲಾಖೆ ವಿಚಾರಣೆಯನ್ನು ಕೈಬಿಡುವ ಪ್ರಸ್ತಾವನೆಯೂ ಚರ್ಚೆಯಲ್ಲಿದೆ.

2025-26 ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನ ವಿವಿಧ ಯೋಜನೆಗಳಿಗೆ 41.80 ಕೋಟಿ ರೂಪಾಯಿಗಳ ಸಮಗ್ರ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸುವುದು, ಬೆಳಗಾವಿಯ ಗೋಕಾಕ್ ತಾಲೂಕಿನಲ್ಲಿ 100 ಹಾಸಿಗೆಗಳ ಹೊಸ ತಾಲೂಕು ಸಾರ್ವಜನಿಕ ಆಸ್ಪತ್ರೆಯನ್ನು 40 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವುದು ಸಂಪುಟದ ಮುಂದಿರುವ ಪ್ರಸ್ತಾವನೆಗಳಾಗಿವೆ.ಪ್ರಮುಖವಾಗಿ ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಕಾರಿಡಾರ್-2 ಮತ್ತು 4 ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ 16,867 ಕೋಟಿ ರೂಪಾಯಿಗಳಿಗೆ ಅನುಮೋದಿಸುವ ಸಾಧ್ಯತೆ ಇದೆ. ಬೆಂಗಳೂರಿನ ಬ್ಯುಸಿನೆಸ್ ಕಾರಿಡಾರ್ ಫೆರಿಫರಲ್ ರಿಂಗ್ ರಸ್ತೆಗೆ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ಪೈಕಿ, 948 ಎಕರೆಗೂ ಹೆಚ್ಚಿನ ಜಮೀನಿಗೆ ಭೂ ಮಾಲೀಕರಿಗೆ 2025ರ ಅಕ್ಟೋಬರ್ 17ರಂದು ಹೊರಡಿಸಿರುವ ಆದೇಶದಂತೆ ಪರಿಹಾರ ನೀಡಲು

## ರಾಯಚೂರಿನ ಡಿವೈಎಸ್ಪಿ ಶಾಂತವೀರಗೆ ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿ ಪ್ರದಾನ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.2–** ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ನೀಡುವ ಪ್ರತಿಷ್ಠಿತ ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿಯನ್ನು ರಾಯಚೂರಿನ ಡಿವೈಎಸ್ಪಿ ಶಾಂತವೀರ ಅವರಿಗೆ ಪ್ರದಾನ ಮಾಡಲಾಯಿತು.



ಬೆಂಗಳೂರಿನ ಪ್ರೆಸ್ ಕ್ಲಬ್ ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾರ್ವಜನಿಕ ಸೇವೆ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ತೋರಿದ ನಿಷ್ಠೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ ಈ ಗೌರವ ನೀಡಲಾಗಿದೆ. ಹಿರಿಯ ಪತ್ರಕರ್ತರು, ಪೊಲೀಸ್ ಇಲಾಖೆ ಅಧಿಕಾರಿಗಳು, ಸಾರ್ವಜನಿಕ ಗಣ್ಯರು ಹಾಗೂ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಿವೈಎಸ್ಪಿ ಶಾಂತವೀರ, ಈ ಗೌರವ ನನ್ನ ಜವಾಬ್ದಾರಿ ಇನ್ನಷ್ಟು ಹೆಚ್ಚಿಸಿದೆ. ಸಮಾಜದ ಸುರಕ್ಷತೆ ಮತ್ತು ನ್ಯಾಯಕ್ಕಾಗಿ ಇನ್ನಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡುವೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ ಸಭಾಪತಿಗಳಾದ ಯು.ಟಿ. ಖಾದರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಶಿಕ್ಷಣ ಸಚಿವ ಮಧುಬಂಗಾರಪ್ಪ, ಎನ್.ಎ.ಹ್ಯಾರೀಸ್ ಸೇರಿದಂತೆ ಹಲವು ಪತ್ರಕರ್ತರು ಗಣ್ಯರು ಉಪಸ್ಥಿತರಿದ್ದರು.

## ಅನ್ಯಕೋಮಿನ ವ್ಯಕ್ತಿಯನ್ನು ವಿವಾಹವಾದ ಯುವತಿಯ ಹತ್ಯೆ ನಡೆಸಿದ ಅರೋಪಿಗಳನ್ನು ಬಂದಿಸುವಂತೆ ಮನವಿ



ಯುವಮಾರ್ಗ ಸುದ್ದಿ

**ಮಾನ್ವಿ,ಜ.2–** ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಚಂದ್ರಕಾಂತ ಎನ್ ಕಾದ್ರೋಳಿ ಬಣದ ವತಿಯಿಂದ ಮುಖ್ಯ ಮಂತ್ರಿಗಳಿಗೆ ತಹಸೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ರವರ ಮೂಲಕ ಮನವಿ ಸಲ್ಲಿಸಿ ಕ.ರಾ.ದ.ಸಂ.ಸಮಿತಿ ಜಿಲ್ಲಾಧ್ಯಕ್ಷ ಅಬ್ರಹಂ ಪನ್ನೂರು ಮಾತನಾಡಿ ರಾಜ್ಯದ ಹುಬ್ಬಳ್ಳಿ ತಾಲೂಕಿನ ಇನಾಮ ವೀರಾಪೂರ ಗ್ರಾಮದಲ್ಲಿ ಮಾನ್ಯ ಎನ್ನುವ ಯುವತಿ ದಲಿತ ಸಮುದಾಯದ ಯುವಕನೊಂದಿಗೆ ವಿವಾಹವಾಗಿಳೆ ಎಂದು ಕುಟುಂಬದವರು ಹಾಗೂ ತಂದೆ ಸೇರಿಕೊಂಡು ಮಾರ್ಯದೆಗೇಡು ಹತ್ಯೆ ನಡೆಸಿರುವುದು ನಾಗರೀಕ ಸಮಾಜ ತಲೆ ತಗ್ಗಿಸುವ ವಿಷಯವಾಗಿದೆ ಕೂಡಲೇ ಅರೋಪಿತರನ್ನು ಬಂದಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾ.ಅಧ್ಯಕ್ಷ ಸದಾನಂದ ಪನ್ನೂರು, ತಾ.ಕಾರ್ಯದರ್ಶಿ ವಸಂತ ಕೊಟ್ನೆಕಲ್, ದಲಿತ ಮುಖಂಡರಾದ ರವೀಂದ್ರ ಜಾನೇಕಲ್, ರಾಜಕುಮಾರ ಕುರ್ಡಿ,ಹನುಮಂತ ಕೋಟ್ನೆಕಲ್,ಬಸವರಾಜ ಬಲ್ಲಟಗಿ, ಸ್ವಾಮಿದಾಸ ಕುರ್ಡಿ,ಬಸವರಾಜ,ವೆಂಕಟೇಶ್ ಸೇರಿದಂತೆ ಇನ್ನಿತರರು ಇದ್ದರು.

## ಯರಮರಸ್ ನೂಲಿ ಗಿರಣಿ ಕಾರ್ಮಿಕರಿಗೆ ಬಾಕಿ ವೇತನ,ಭತ್ಯೆ ವಂಚನೆ ಸರ್ಕಾರಿ ಭೂಮಿ ಅಕ್ರಮವಾಗಿ ಹರಾಜು: ತಿಂಗಳೊಳಗೆ ಇತ್ಯರ್ಥ ಪಡಿಸಿದ್ದರೆ ಹೋರಾಟ-ಶಿವುಕುಮಾರ ಮ್ಯಾಗಳಮನಿ

ಯುವಮಾರ್ಗ ಸುದ್ದಿ

**ರಾಯಚೂರು,ಜ.2–** ಯರಮರಸ್ ನೂಲಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ 550 ಕಾರ್ಮಿಕರಿಗೆ ಯಾವುದೇ ಬಾಕಿವೇತನ, ಭತ್ಯೆಗಳನ್ನು ನೀಡದೇವಂಚಿ ಸಲಾಗಿದ್ದು ಸರ್ಕಾರಿ ಭೂಮಿಯನ್ನು ಆನಧಿಕೃತವಾಗಿ ಹರಾಜು ಮಾಡಿ ಅನ್ಯಾಯ ಮಾಡಲಾಗಿದೆ. ಒಂದು ತಿಂಗಳೊಳಗೆ ಪ್ರಕರಣ ಇತ್ಯರ್ಥಗೊಳಿಸದೇ ಹೋದಲ್ಲಿ ನ್ಯಾಯಾಂಗ ಮೊರೆ ಜೊತೆಗೆ ಕಾರ್ಮಿಕರ ಅನಿರ್ದಿಷ್ಟ ಹೋರಾಟ ನಡೆಸಲಾಗುತ್ತದೆ ಎಂದು ಹೋರಾಟಗಾರ ಶಿವುಕುಮಾರ ಮ್ಯಾಗಳಮನಿ ಹೇಳಿದರು.




ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, ಸರ್ಕಾರಿ ಜಮೀನಲ್ಲಿದ್ದ ಸಹಕಾರಿ ನೂಲಿನ ಗಿರಣಿಯನು 1997 ರಲ್ಲಿ ಮುಚ್ಚಲಾಗಿದೆ. ನೂಲಿ ಗಿರಣಿ ಮಾಲೀಕತ್ವ ಇಲ್ಲದೇ ಇದ್ದರೂ ಸಹಕಾರಿ ಇಲಾಖೆ ಅಧಿಕಾರಿಗಳು ಭೂಮಿಯನ್ನು ಖಾಸಗಿ ಯವರಿಗೆ ನೀಡಲಾಗಿದೆ. 40.25 ಎಕರೆ ಭೂಮಿಯೂ ಸಹ ಹರಾಜಿನ ಮೂಲಕ ಮಾರಾಟ ಮಾಡಲಾಗಿದೆ. (2ನೇ ಪುಟಕ್ಕೆ>>>)

## ಆರೋಗ್ಯ ತಪಾಸಣೆ ಸದುಪಾಯೋಗ ಮಾಡಿಕೊಳ್ಳಿ ಪಿಡಿಓ ವೆಂಕೋಬ ನಾಯಕ ಕರೆ

ಯುವಮಾರ್ಗ ಸುದ್ದಿ

**ದೇವದುರ್ಗ,ಜ.2–** ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಗಲಗ ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರ ಮತ್ತು ಪಿಪಿಎಚ್‌ಎಫ್, ಪ್ರಣಾ ಯೋಜನೆಯ ಜಿಇ ಹೆಲ್ತ್‌ಕೇರ್ ಸಂಯುಕ್ತಾಶ್ರಯದಲ್ಲಿ ಜಂಟಿಯಾಗಿ ಉಚಿತ ಮಹಿಳಾ ಆರೋಗ್ಯ ತಪಾಸಣಾ ಶಿಬಿರವನ್ನು ಬಿ.ಗಣೇಕಲ್ ಗ್ರಾಮದ ಸರ್ಕಾರಿ ಮಾದರಿ ಶಾಲೆಯ ಆವರಣದಲ್ಲಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ವೆಂಕೋಬ ನಾಯಕ ಉದ್ಘಾಟಿಸಿದರು.

ಇತ್ತೀಚ್ಚಿನ ದಿನಗಳಲ್ಲಿ ಕೆಲಸದ ಒತ್ತಡದಿಂದ ಆರೋಗ್ಯ ಕಡೆ ಹೆಚ್ಚಿನ ಕಾಳಜಿಯನ್ನ ಯಾರೂ ಕೂಡ ಕೊಡುತ್ತಿಲ್ಲ ,ಆಹಾರ ಪದ್ಧತಿಯಿಂದ ಹಠಾತ್ ಸಾವು ನೋವುಗಳು ಹೆಚ್ಚಾಗಿವೆ. ಪ್ರತಿಯೊಂದು ಮನೆಯಲ್ಲಿ ಆರೋಗ್ಯ ಸಮಸ್ಯೆಗಳು ಕಂಡುಬರುತ್ತಿವೆ. ಗ್ರಾಮಕ್ಕೆ ನಿಮ್ಮ ಆರೋಗ್ಯ ತಪಾಸಣೆ ಮಾಡಲು ವೈದ್ಯರ ತಂಡವೇ ನಿಮ್ಮ ಮನೆ ಬಾಗಿಲಿಗೆ ಬಂದಿದ್ದು, ಇದೊಂದು ಉತ್ತಮ ಗಳಿಗೆಯಾಗಿದ್ದು,ಪ್ರತಿಯೊಬ್ಬರು ತಮ್ಮಲ್ಲಿರುವ ಆರೋಗ್ಯ ಸಮಸ್ಯೆಯನ್ನ ಮುಕ್ತವಾಗಿ ಹೇಳಿಕೊಳ್ಳಿ ಇದರ ಸದುಪಾಯೋಗ ಮಾಡಿಕೊಳ್ಳಿ, ಅದೇ ರೀತಿ ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರದ ಯೋಜನೆಗಳನ್ನ ಬಳಸಿಕೊಳ್ಳಿ, ಪ್ರತಿಯೊಂದು ಕುಟುಂಬವು ಶೌಚಾಲಯವನ್ನ ಬಳಸಿ ಗ್ರಾಮದ ಸುತ್ತಮುತ್ತಲು ಪರಿಸರ ಸ್ವಚ್ಛತೆ ಕಾಪಾಡಲು ಹೇಳಿದರು.

ನಂತರ ದಂತವೈದ್ಯರು ಡಾ.ನವನೀತ ಗಬ್ಬೂರು ಮಾತನಾಡಿ ಈ ಭಾಗದಲ್ಲಿ ಹೆಚ್ಚಿನ ಫ್ಲೋರೈಡ್ ನೀರಿನ ಅಂಶವಿರುವುದರಿಂದಾಗಿ ಪ್ರತಿಯೊಬ್ಬರಲ್ಲಿ ಹಲ್ಲಿನ ಪಾಚು ಜಿಡ್ಡು ಹಿಡಿದಿರುವುದು ಕಂಡು ಬರುತ್ತಿದೆ. ಹಲ್ಲುಗಳ ಸ್ವಚ್ಛತೆ ಬಗ್ಗೆ ಗಮನ ಕೊಡಿ ಮತ್ತು ಗುಟ್ಕಾ ತಿನ್ನುವುದರಿಂದ ಕ್ಯಾನ್ಸರ್ ಜೊತೆಗೆ ಬಾಯಿ ಸಮಸ್ಯೆ ಬರುತ್ತದೆ ಎಂದು ಸಲಹೇ ನೀಡಿದರು. ನಂತರ ಸಮುದಾಯ ಆರೋಗ್ಯ ನಿರೀಕ್ಷಣ ಅಧಿ ಕಾರಿ ರಾಚಪ್ಪ ಗೌಡ ಮಾತನಾಡಿ ಮಹಿಳೆಯರಿಗೆ ಆರೋಗ್ಯ ತಪಾಸಣೆ ಮಾಡಿಸುವ ಉದ್ದೇಶ ಮತ್ತು ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಯ ಖರ್ಚು ಉಳಿಸುವ ಉದ್ದೇಶದಿಂದ ಗರ್ಭಗಂಠ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್ ಅಧಿಕ ರಕ್ತದ ಒತ್ತಡ ಎತ್ತರ ತೂಕ ಹಾಗೂ ಬಿಪಿ ಶುಗರ್ ತಪಾಸಣೆ, ಕಣ್ಣು ತಪಾಸಣೆ, ಬಾಯಿ ಮತ್ತು ಹಲ್ಲು ತಪಾಸಣೆ, ಆರ್‌ಎಫ್‌ಟಿ ಎಲ್‌ಎಫ್‌ಟಿ ಪರೀಕ್ಷೆ ಮತ್ತು ಪೌಷ್ಟಿಕ ಆಹಾರ ಸೇವನೆ ಕುರಿತು ಪಿಪಿಎಹ್‌ಎಫ್ ಸಂಸ್ಥೆ ಯವರು ತಜ್ಞರಿಂದ ಉಚಿತವಾಗಿ ನೀಡುದ್ದಾರೆ ಇದನ್ನ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಸ್ತಾವಿಕ ಮಾತನಾಡಿದ ಪೀಪಲ್ ಟು ಪೀಪಲ್ ಸಂಸ್ಥೆಯ ಪ್ರೋಗ್ರಾಮ್ ಮ್ಯಾನೇಜರ್ ಮಲ್ಲೈಕಾ ಅಮೀನ ಇವರು ಮಾತನಾಡಿದರು. ಫಾಸ್ಟುಡ್ ಆಹಾರ ಬಳಸುವುದರಿಂದ ಉಂಟಾಗುವ ಆರೋಗ್ಯ ಸಮಸ್ಯೆ ಕುರಿತು ಪ್ರೊಜಕ್ಟರ್ ಮೂಲಕ ಬಿತ್ತರಿಸಿದರು. ಈ ಸಂದರ್ಭದಲ್ಲಿ ಮಹಿಳಾ ವೈದ್ಯರು ಡಾ.ಅಪೇಕ್ಷ, ಕಣ್ಣು ತಜ್ಞರು ವೆಂಕಟೇಶ ಮಸ್ಕಿ,ಹಲ್ಲು ತಜ್ಞರು ಡಾ.ನವನೀತ ಗಬ್ಬೂರು,ಶಾಲೆಯ ಮುಖ್ಯೋಪಾಧ್ಯಯರು ಬಸವರಾಜ, ಲ್ಯಾಬ್ ಟೆಕ್ನಿಷಿಯನ್ ಅರ್ಶದ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂಧಿ ರೇಷ್ಮಾ ಬೇಗಂ ಹಾಗೂ ಪಿಪಿಹೆಚ್‌ಎಫ್ ಸಿಬ್ಬಂಧಿ ಓಂಕಾರ,ಆಫ್ರೀನ್ ಆಶಾ ಕಾರ್ಯಕರ್ತರು ಗ್ರಾಮಸ್ಥರು ಸ್ವಯಂ ಸೇವಕರು ಇದ್ದರು.

## ಜ.4 ರಂದು ಜಿಲ್ಲಾ ಮಹಿಳಾ ಪರಿಷತ್ ಉದ್ಘಾಟನೆ ಸಾಧಕರಿಗೆ ಪ್ರಶಸ್ತಿ ಪ್ರದಾನ- ಅಣ್ಣಪ್ಪ ಮೇಟಿಗೌಡ

ಯುವಮಾರ್ಗ ಸುದ್ದಿ

**ರಾಯಚೂರು,ಜ.2–** ಮಹಿಳಾ ಸಾಹಿತ್ಯ ಪರಿಷತ್ ಉದ್ಘಾಟನೆ, ನೂತನಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಡಿ.4 ನಂದು ನಗರದ ಕನ್ನಡ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಸಂಸ್ಥಾಪಕ ಅಣ್ಣಪ್ಪ ಮೇಟಗೌಡ ಹೇಳಿದರು.



ಅವರಿಂದು ಮಾಧ್ಯಮಗೋಷ್ಠಿಉದ್ದೇಶಿಸಿ ಮಾತನಾಡಿ, ಕಾರ್ಯಕ್ರಮವನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಜಯಲಕ್ಷ್ಮೀ ಉದ್ಘಾಟಿಸಲಿದ್ದಾರೆ. ಪ್ರಶಸ್ತಿಗಳನ್ನು ನಗರ ಶಾಸಕ ಡಾ.ಶಿವರಾಜ ಪಾಟೀಲ್, ಗ್ರಾಮೀಣ ಶಾಸಕ ದದ್ದಲ ಬಸನಗೌಡ ಪ್ರದಾನ ಮಾಡಲಿದ್ದಾರೆ. ಅಧ್ಯಕ್ಷತೆಯನ್ನುಪರಿಷತ್ ನೂತನ ಅಧ್ಯಕ್ಷೆ ಸಕ್ರಿವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದೇವದುರ್ಗ ಶಾಸಕಿ ಜಿ.ಕರೆಮ್ಮನಾಯಕ, ಡಾ.ಅರುಣಾ ಹೀರೆಮಠ, ಸಾಹಿತ್ಯ ಪರಿಷತ್ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣ ಸಾವಂತಗೇರ, ಕೆಪಿಸಿಸಿ ಉಪಾಧ್ಯಕ್ಷೆ ಶ್ರೀ ದೇವಿನಾಯಕ, ಮಹಿಳಾ ಕಾಂಗ್ರೆಸ್ ಅಧ್ಯಕ್ಷ ನಿರ್ಮಲಾಬೆಣ್ಣೆ, (2ನೇ ಪುಟಕ್ಕೆ)

ಯುವ ಮಾರ್ಗ

www.yuvamarga.com Yuva Marga yuva_marga_

# ಮೊದಲನೇಯ ಪುಟದಿಂದ

## ಸರ್ಕಾರಿ ಭೂಮಿ ಅಕ್ರಮವಾಗಿ ಹರಾಜು: ತಿಂಗಳೊಳಗೆ ಇತ್ಯರ್ಥ ಪಡಿಸಿದ್ದರೆ ಹೋರಾಟ-ಶಿವುಕುಮಾರ ಮ್ಯಾಗಳಮನಿ

ಸರ್ವೆ 55/1ರಲ್ಲಿರುವ ಒಂದು ಎಕರೆ, 16 ಎ ರಲ್ಲಿರುವ 35 ಗುಂಟೆ, ಸರ್ಕಾರಿ ಗೈರಾಣಿ55/2ಸಿ ರಲ್ಲಿರುವ ಆರು ಎಕರೆ 13 ಗುಂಟೆ ಪರಂಪೋಕನಲ್ಲಿ ಏಗನೂರು ಗ್ರಾಮದ ಸರ್ವೆ ನಂಬರ 254/3/2 ಹದಿನೈರು ಎಕರೆ ಮೂವತ್ತೇಳು ಗುಂಟೆ, ಏಗನೂರು ಸರ್ವೆ 254/4 ಒಂದು ಎಕರೆ ಇಪತ್ತು ಗುಂಟೆ ಸೇರಿ 40 ಎಕರೆ 25 ಗುಂಟೆ ಭೂಮಿ ನೂಲಿ ಗಿರಣಿ ಮಂಜೂರಾಗಿಲ್ಲ. ಸರ್ಕಾರಿ ಜಮೀನನ್ನು ಬಸಂತ ಟೆಕ್ಸಟೆಲ್ ಕಂಪನಿ, ಮರೆಂಟೈಲ್ ಹಾಗೂ ಮೋಹಿನಿ ಇನ್ ಫ್ರಾ ಕಂಪನಿಗೆ ಹರಾಜು ಮಾಡಲಾಗಿದೆ. 2011 ರಲ್ಲಿ ಸಹಾಯಕ ಆಯುಕ್ತರು ಕರ್ನಾಟಕ ಸರ್ಕಾರ ಜಮೀನು ಎಂದು ನಮೂದಿಸಿದ್ದರು. 2017-18 ರಲ್ಲಿ ದೀಪಕ್ ಇನ್ನಾಣಿ ಹೆಸರನ್ನು ಪಹಣಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಆದರೆ ಕಾರ್ಮಿಕರಿಗೆ ಬಾಕಿ ವೇತನ, ಗ್ರಾಚ್ಯುಟಿ, ಪಿಎಫ್ ಹಣ ಇಂದಿಗೂ ಪಾವತಿಸಿಲ್ಲ. 550 ಕಾರ್ಮಿಕರಿಗೆ ನ್ಯಾಯ ಒದಗಿಸಲು ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ ಇತ್ಯರ್ಥಪಡಿಸಬೇಕು. ಇಲ್ಲದೇ ಹೋದಲ್ಲಿ ತೀವ್ರ ಹೋರಾಟ ನಡೆಸುವದಾಗಿ ಹೇಳಿದರು. ಈ ಸಂದರ್ಬದಲ್ಲಿ ಇನಸುಲ್ಲಾ, ರುದ್ರಗೌಡ, ಕೃಷ್ಣ ಸೇರಿದಂತೆ ಅನೇಕರಿದ್ದರು.

## ಜ.4 ರಂದು ಜಿಲ್ಲಾ ಮಹಿಳಾ ಪರಿಷತ್ ಉದ್ಘಾಟನೆ ಸಾಧಕರಿಗೆ ಪ್ರಶಸ್ತಿ ಪ್ರದಾನ- ಅಣ್ಣಪ್ಪ ಮೇಟಿಗೌಡ

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ವಿಜಯರಾಜೇಶ್ವರಿ ನಾಗರತ್ನ ಬಿ.ಪಾಟೀಲ್, ವೆಂಕನಗೌಡ ವಟಗಲ್ ವಹಿಸಲಿದ್ದಾರೆ. ಪದಗ್ರಹಣವನ್ನು ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷೆ ಚಂದ್ರಶೇಖರ ಪಾಟೀಲ್ ಮಿರ್ಜಾಪುರು ಚಾಲನೆ ನೀಡಲಿದ್ದಾರೆ. ಡಿವೈಎಸ್ಪಿ ಈ ಶಾಂತವೀರ ಹಾಗೂ ನಿವೃತ್ತ ಶಿಕ್ಷಣಾಧಿಕಾರಿ ಇಂದಿರಾ ಇವರಿಗೆ ವಿಶೇಷ ಸನ್ಮಾನಕಾರ್ಯಕ್ರಮನಡೆಯಲಿದೆ. ರಿಷಿಕಾ ಸಿದ್ದಯ್ಯ, ಸಾನ್ನಿ ಸಿದ್ದಯ್ಯ, ಚಂದನಾ ಹೀರೆಮಠ ಹಾಗೂ ಸಿಕ್ಕೇಚರ್ ಡ್ಯಾನ್ಸ್ ಸ್ಟುಡಿಯೋ ಹಾಗೂಮೋನಿಕಾ ನೃತ್ಯ ಕಲಾ ಸಂಸ್ಥೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳುನಡೆಯಲಿವೆ.

ವಿವಿಧ ಕ್ಷೇತ್ರಗಳ ಸಾಧಕರಿಗೆ ಕಾಯಕ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ದಾನಮ್ಮ ಸುಭಾಷಚಂದ್ರ ತಡಕಲ್, ಸಮಾಜ ಸೇವೆಯಲ್ಲಿ ಈರಮ್ಮ ಗುಂಬಳ್ಳಿ, ಇನ್ನರವೀಲ್ ಕ್ಲಲ್ ಅಧ್ಯ ಸುಷ್ಮಾ ಪತಂಗೆ, ಅಂತರಾಷ್ಟ್ರೀಯ ಕ್ರೀಡಾಪಟು ಕಲ್ಯಾಣಿ.ಎಸ್.ಜಿ.ಶಿವಮೊಗ್ಗ, ಕಲಾಸಂಕುಲ ಸಂಸ್ಥೆಯ ಅಧ್ಯಕ್ಷ ರೇಖಾ ಬಡಿಗೇರ, ಮಾ ಶಿಕ್ಷಕಿ ಜ್ಯೋತಿ ಚೆನ್ನಪ್ಪ ಮಾರಲದಿನ್ನಿ, ಅಂತರಾಷ್ಟ್ರೀಯ ಕ್ರೀಡಾಪಟು ಮೈಸೂರಿನ ಉಮಾ.ಎಸ್.ಎಂ. ರಂಗಭೂಮಿ ಕಲಾವಿದೆ ದೀಪಾ ಜೋಗತಿಕಡದಿನ್ನಿ, ಆಶಾದೀಪ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ದೇಖಾ ವೈದ್ಯೆ, ಸಾಹಿತ್ಯ ಕ್ಷೇತ್ರದಲ್ಲಿ ಮಧುಕುಮಾರಿ ಪಾಂಡೆ, ಸ್ತ್ರೀರೋಗ ತಜ್ಞೆ ಡಾ.ನರಸುಬಾಯಿ, ಸಂಶೋಧನೆಯಲ್ಲಿ ಡಾ.ಗಂಗಮ್ಮ ಸತ್ಯಂಪೇಟೆ ಇವರಿಗೆ ಪ್ರದಾನ ಮಾಡಲಾಗುತ್ತದೆ.

ಮಧ್ಯಾಹ್ನ 2.30 ಗಂಟೆಗೆ ಕವಿಗೋಷ್ಠಿ ನಡೆಯಲಿದ್ದು ಗೋಷ್ಠಿಯನ್ನು ಸಾಹಿತಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಕಲ್ಲೂರಕರ ವಹಿಸಿಕೊಳ್ಳಲಿದ್ದಾರೆ. ನುಡಿಯನ್ನು ವೆಂಕಟೇಶ ಬಾಗಲವಾಡ ನಿರ್ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ, ಛಾಯಾ ಕೋಳೂರು, ಬೀರಪ್ಪ ಶಂಭೋಜಿ, ಸುಮತಿ ಶಾಸ್ತ್ರಿ, ಶಾಂತಾ ಒಳಗಿನಮನೆ, ದೇವೆಂದ್ರ, ರೇಖಾ ಪಾಟೀಲ್, ಸರಿತಾ ಮಹೇಶ, ಮಹಾಂತೇಶ ಗವಿಗಟ್, ಎ.ಎಸ್.ಕೆ.ಸ್ವಾಮಿ ಆಗಮಿಸಲಿದ್ದಾರೆ ಎಂದರು.

ಈ ಸಂದರ್ಬದಲ್ಲಿ ಡಾ.ಸರ್ವಮಂಗಳ ಸಕ್ತಿ, ಸರಿತಾ ಮಹೇಶ, ಧರ್ಮವತಿ .ಎಸ್.ನಾಯಕ ಉಪಸ್ಥಿತರಿದ್ದರು.

## ಕೋಗಿಲು ಒತ್ತುವರಿ ತೆರವು, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ಸೇರಿ ಹಲವು ವಿಷಯ ಸಂಪುಟದಲ್ಲಿ ಚರ್ಚೆ

ಸಂಪುಟದಲ್ಲಿ ಚರ್ಚೆ ನಡೆದಿದೆ. ಬೆಂಗಳೂರಿನ ಯಲಹಂಕ ಬಳಿಯ ಮಾದಪ್ಪನಹಳ್ಳಿಯಲ್ಲಿ ಕಾಯ್ದಿಟ್ಟ ಅರಣ್ಯ ಭೂಮಿ ಪೈಕಿ 153 ಎಕರೆಯಲ್ಲಿ ವಿಶ್ವಗುರು ಬಸವಣ್ಣನವರ ಜೀವ ವೈವಿಧ್ಯಮಯವಾದ ಬೃಹತ್ ಉದ್ಯಾನವನ ನಿರ್ಮಿಸುವ ಬಗ್ಗೆ ಚರ್ಚೆಯಾಗಿದೆ. ಇದಕ್ಕಾಗಿ 50 ಕೋಟಿ ರೂ. ಖರ್ಚು ಮಾಡುವ ಸಾಧ್ಯತೆ ಇದೆ.

ಕರ್ನಾಟಕ ಗೃಹ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣವಿಧೇಯಕ 2026 ಕ್ಕೆ ಅನುಮೋದಿಸುವ ಬಗ್ಗೆ ಚರ್ಚೆಗಳಾಗುತ್ತಿವೆ.

ಬೆಂಗಳೂರಿನಲ್ಲಿರುವ ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆಯ ಆವರಣದಲ್ಲಿ 10 ಎಕರೆ ಜಮೀನನ್ನು ಎಲ್ಲಾ ಅಂಗಾಂಗ ಕಸಿ ಒಳಗೊಂಡಂತೆ ಚಾರಿಟಬಲ್ ಸೂಪರ್ ಸ್ಪೆಷಾಲಿಟಿ ಟರ್ಷಿಯರಿ ಆರೈಕೆ ಆಸ್ಪತ್ರೆಯನ್ನು ನಿರ್ಮಾಣ ಮಾಡಲಿಕ್ಕಾಗಿ ಅಜೀಮ್ ಪ್ರೆ?ಮ್ ಜಿ ಫೌಂಡೇಶನ್ ಗೆ 99 ವರ್ಷಗಳ ಅವಧಿಗೆ ಭೂಮಿಯನ್ನು ಗುತ್ತಿಗೆ ನೀಡುವ ಒಪ್ಪಂದ ಕುರಿತು ಹಾಗೂ ಕಿದ್ವಾಯಿ ಸಾರಕ ಗ್ರಂಥಿ ಸಂಸ್ಥೆಗೆ ಒಟ್ಟು 24 ಕೋಟಿ ವೆಚ್ಚದಲ್ಲಿ ಅಗತ್ಯ ಯಂತ್ರೋಪಕರಣಗಳನ್ನು ಪೂರೈಸುವ ಚರ್ಚೆಗಳಾಗಿವೆ.

ಉದ್ಯೋ?ಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರ ವಿಕಸಿತ ಭಾರತ ಜಿ ರಾಮ್ ಜಿ ಎಂದು ನಾಮಕರಣ ಮಾಡಿದ್ದು, ಅದರ ಅನುಷ್ಠಾನ ಬಗ್ಗೆ ಚರ್ಚೆಗಳಾಗುತ್ತಿವೆ. ಇನ್ಫೋಸಿಸ್ ಸಂಸ್ಥೆ ವತಿಯಿಂದ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳ 94 ಸರ್ಕಾರಿ ಶಾಲೆಗಳಿಗೆ ಹಾಗೂ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ 16 ಸರಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತಿಕರಿಸಲು 685.57 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಗೆ ಅನುಮತಿಸುವ ಸಾಧ್ಯತೆ ಇದೆ.ಕೋಗಿಲು ಕ್ರಾಸ್ ಬಳಿ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣದಲ್ಲಿ ಸಂತ್ರಸ್ಥರಿಗೆ ಮನೆ ನೀಡುವ ಬಗ್ಗೆಯೂ ಚರ್ಚೆಯಾಗಬೇಕಿದೆ.

## ಉದ್ಬಾಳ (ಯು) ಗ್ರಾಮದ ಶ್ರೀ ಅಂಬಾದೇವಿ ಪುರಾಣ, ಕಳಸ ಮೆರವಣಿಗೆ ನಿಷೇಧ ಆದೇಶ ತೆರವು

ಯುವಮಾರ್ಗ ಸುದ್ದಿ



**ರಾಯಚೂರು,ಜ.2–** ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮದಲ್ಲಿ 3-1-2026ರಂದು ಜರುಗುವ ಶ್ರೀಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಆಚರಿಸುವುದು ಹಾಗೂ ಮರವಣಿಗೆ ಮಾಡುವದನ್ನು ನಿಷೇಧಿಸಿರುವ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಮಸ್ಕಿ ತಹಶೀಲ್ದಾರರು ದಿನಾಂಕ 31-12-2025 ರಂದು ಖುದ್ದಾಗಿ ಹಾಗೂ ಬಳಗಾನೂರು ಪಿ.ಎಸ್.ಐ. ಅವರೊಂದಿಗೆ ಬಳಗಾನೂರು ಠಾಣಾ ವ್ಯಾಪ್ತಿಯ ಉದ್ಬಾಳ ಗ್ರಾಮಕ್ಕೆ ತೆರಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಜನಗಳೊಂದಿಗೆ ಶಾಂತಿ ಸಭೆ ನಡೆಸಿ ಶ್ರೀ ಅಂಬಾದೇವಿ ಪುರಾಣ ಹಾಗೂ ಕಳಸ ಮರವಣಿಗೆ ಜರುಗುವ ಸಂದರ್ಭದಲ್ಲಿ ಯಾವುದೇ ಗಲಾಟೆಯಾಗದಂತೆ ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ತಿಳಿ ಹೇಳಿದ್ದಾರೆ. ಜನ ಪ್ರತಿನಿಧಿಗಳ ಸಮ್ಮುಖದಲ್ಲಿ ಗ್ರಾಮದಲ್ಲಿನ ನಾನಾ ಪಕ್ಷಗಳ ಕಾರ್ಯಕರ್ತರಿಗೆ ಮನವೊಲಿಸಿ ಮುಖಂಡರಿಗೆ ಸದ್ವರ್ತನೆಯಿಂದಿರುವಂತೆ ಸೂಚಿಸಿದ್ದಾರೆ. ಉದ್ಬಾಳ (ಯು) ಗ್ರಾಮಸ್ಥರಿಂದ ಒಪ್ಪಿಗೆ ಪ್ರಮಾಣ ಪತ್ರವನ್ನು ಬರೆಸಿಕೊಳ್ಳಲಾಗಿದೆ. ಶಾಂತಿ ಒಪ್ಪಂದ ನಡೆಸಿ ಇಬ್ಬರ ಕಡೆಯಿಂದಲೂ ಒಪ್ಪಿತ ರೀತಿಯಲ್ಲಿ ಜಾತ್ರಾ ಮಹೋತ್ಸವ ನಡೆಸುವಂತೆ ಊರಿನ ಮುಖಂಡರ ಸಮ್ಮುಖದಲ್ಲಿ ಸಂಧಾನ ನಡೆಸಿ ಜಾತ್ರಾ ಮಹೋತ್ಸವ ನಡೆಸುವಂತೆ ತಿಳಿ ಹೇಳಲಾಗಿದೆ. ಆದ್ದರಿಂದ ಶ್ರೀ ಅಂಬಾದೇವಿಯ ಜಾತ್ರಾ ಮಹೋತ್ಸವ ನಡೆಸಲು ಸಾರ್ವಜನಿಕರ ಹಿತದೃಷ್ಟಿಯಿಂದ, ಈ ಗ್ರಾಮದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ, ಮುಂಜಾಗ್ರತಾ ಕ್ರಮದ ದೃಷ್ಟಿಯಿಂದ ದಿನಾಂಕ: 03-01-2026 ರಂದು ಜಾತ್ರಾ ಮಹೋತ್ಸವವನ್ನು ನಡೆಸುವಂತೆ ಅನುಮತಿ ನೀಡಲು ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಮಸ್ಕಿ ತಹಸೀಲ್ದಾರರ ವರದಿಯನ್ವಯ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮದಲ್ಲಿ ದಿನಾಂಕ: 03-01-2026 ರಂದು ಜರುಗುವ ಶ್ರೀ ಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆಯನ್ನು ನಡೆಸುವುದನ್ನು ನಿಷೇಧಿಸಿ ಹೊರಡಿಸಿದ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು ಮತ್ತು ತಹಶೀಲ್ದಾರ ಮಸ್ಕಿ ಅವರು ಯಾವುದೇ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಆದೇಶದಲ್ಲಿ ಸೂಚಿಸಿರುತ್ತಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

## ರಾಯಚೂರು ನಗರದಲ್ಲಿ ಜನವರಿ ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು ಜ,2–**ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಕಂಡಕ್ಟರಿಂಗ್ ದುರಸ್ತಿ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತಇಂದು ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 05 ಗಂಟೆವರೆಗೆ ಬನಶಂಕರಿ ರೊಟ್ಟಿ ಕೇಂದ್ರದಿಂದ ಮಾರೆಮ್ಮ ಗುಡಿ ರಾಂಪೂರು ರೋಡ್‌ವರೆಗೆ, ಮಾರೆಮ್ಮ ಗುಡಿ ರಾಂಪೂರು ರೋಡ್‌ರಿಂದ ವಿಜಿಲೆನ್ಸ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿರುವ ದೀಪಕ್ ಮನೆವರೆಗೆ ಮತ್ತು ಬೆಲ್ಲಂ ಕಾಲೋನಿಯ ಸುಬ್ರಮಣ್ಯ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-226386, 08532-231999, 9480845955 ಮತ್ತು 9448395624ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿಶೇಷ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು ಜ,2** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಬಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾಸಿಂಧು ಪೋರ್ಟ್ಲ್‌ನ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯಭ್ಯರ್ಥಿಗಳು ಎನ್‌ಸಿಟಿಇಯಿಂದ ಮಾನ್ಯತೆ ಪಡೆದಿರುವ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿರುವ ಮುಸ್ಲಿಂ ಕ್ರಿಶ್ಚಿಯನ್, ಜೈನ್ ಸಿಖ್, ಬೌದ್ಧ್ ಹಾಗೂ ಪಾರ್ಸಿ ಸಮುದಾಯದ ವಿದ್ಯಾರ್ಥಿಗಳಿಗೆ 25,000 ರೂ.ಗಳ ವಿಶೇಷ ಪ್ರೋತ್ಸಾಹಧನ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರ ಜಮಾ ಮಾಡಲಾಗುವುದು. ಈ ಬಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ವಿಳಾಸ: https:// sevasindhu.karnataka.gov.in ನಲ್ಲಿ ಜನವರಿ 15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ: 8277799990 ಹಾಗೂ ಇಲಾಖಾ ವೆಬ್ ಸೈಟ್: https:/ /dom.karnataka.gov.in ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಗರಂಗ ಸಾಂಸ್ಕೃತಿಕ ಕಲಾ ವೇದಿಕೆ ವಾರ್ಷಿಕೋತ್ಸವ ಕಲಾವಿದರಿಗೆ ಪ್ರೋತ್ಸಾಹ ಶ್ಲಾಘನೀಯ – ಪಾಟೀಲ




ಯುವಮಾರ್ಗ ಸುದ್ದಿ

**ರಾಯಚೂರು,ಜ.2–** ಜಿಲ್ಲಾ ಸರ್ಕಾರಿ ನೌಕರರ ಮನೋರಂಜನೆ ಕೇಂದ್ರದಲ್ಲಿ ರಾಗರಂಗ ಸಾಂಸ್ಕೃತಿಕ ಕಲಾ ವೇದಿಕೆಯ ವಾರ್ಷಿಕೋತ್ಸವದ ನಿಮಿತ್ತ ಸಂಗೀತ, ನೃತ, ಮತ್ತು ನಾಟಕ ಸಾಂಸ್ಕೃತಿಕ ಚಟುವಟಿಕೆಗಳ ಕಲಾ ಸಂಗಮ ಮನೋರಂಜನಾ ಕಾರ್ಯಕ್ರಮ ಜರುಗಿತು.ಕಾರ್ಯಕ್ರಮ ಉದ್ಘಾಟಿಸಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ಅಧ್ಯಕ್ಷ ಚಂದ್ರಶೇಖರ ಪಾಟೀಲ ಮಾತನಾಡಿ, ಇಂತಹ ಕಾರ್ಯಕ್ರಮಗಳ ಮೂಲಕ ಕಲಾವಿದರ ಪ್ರೋತ್ಸಾಹಿಸುವ ಕೆಲಸ ಪಂಪಾಪತಿ ಹೂಗಾರ ಮಾಡುತ್ತಿರುವುದು ಶ್ಲಾಘನಿಯ ಎಂದರು.

ಆಹಾರ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ವೆಂಕಣ್ಣ ಮಾತನಾಡಿ, ಶಿಕ್ಷಣ ಇಲಾಖೆಯ ಅಧಿಕಾರಿಯಾಗಿ ನಿವೃತ್ತಿಯಾಗಿರುವ ಪಂಪಾಪತಿ ಹೂಗಾರ ಅವರು ಸಂಗಿ ತ, ರಂಗಭೂಮಿ ಕ್ಷೇತ್ರಗಳಲ್ಲಿ ಅಭಿರುಚಿ ಉಳ್ಳವರಾಗಿದ್ದು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಿಸುತ್ತ ಹೊಸ ಪ್ರತಿಭೆಗಳಿಗೆ ವೇದಿಕೆ ನೀಡಿ ಪ್ರೋತ್ಸಾಹ ನೀಡುತ್ತಿರುವುದು ಸಂತೋಷದ ಹಾಗೂ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ಇತ್ತಿಚೆಗೆ ನಿಧನರಾದ ಖ್ಯಾತ ಹಿಂದೂಸ್ತಾನಿ ಸಂಗೀತ ಶಿಕ್ಷಕ ನಾರಾಯಣ ಢಗೆ ಹಾಗೂ ರಂಗಭೂಮಿ ಕಲಾವಿದ ನರಸಿಂಗ್ ಮಲ್ಕಾರಿ ಅವರಿಗೆ ಸಂತಾಪ ಸಲ್ಲಿಸಲಾಯಿತು.ಕಾರ್ಯಕ್ರಮದಲ್ಲಿ ಜಿ. ಸುದರ್ಶನ್ ಹಿಂದೂಸ್ತಾನಿ ಕ್ಲಾರಿಯೋನಿಟ್ ವಾದನಮಾಡಿದರು. ಕು.ವರ್ಷ ಶಕ್ತಿನಗರ ಇವರಿಂದ ಭರತನಾಟ್ಯ, ಪಂಪಾಪತಿ ಹೂಗಾರ, ವೀರೇಂದ್ರಕುಮಾರ್ ಕುರ್ಡಿ, ನರೇಂದ್ರಕುಮಾರ್, ದೀಪಾ, ಕ್ರಿಷ್ಣಪ್ಪ ಇಂಪಾದ ಹಾಡುಗಳ ಹಾಡಿದರು. ವೆಂಕಟ್ ನರಸಿಂಹಲು ತಂಡದವರಿಂದ ಖರ್ಚಿ-ಖರ್ಚಿ ಎಂಬ ಹಾಸ್ಯಮಯ ನಾಟಕ ಪ್ರದರ್ಶನಗೊಂಡಿತು. ಹೂಗಾರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಂಡ ಕರ್ನಾಟಕ ಹೂಗಾರ ಸಂಘದ ರಾಜ್ಯಾಧ್ಯಕ್ಷ ಬಸವರಾಜ್

## ದೇವಸ್ಗೂರು ಪಾರ್ವತಿ ನಗರದ ನಿವಾಸಿ ಜಮಶೇರ್ ಅಲಿ ಕಾಣೆ, ಅಪಹರಣ: ವ್ಯಕ್ತಿ ಪತ್ತೆಗೆ ಪೊಲೀಸರ ಮನವಿ



**ರಾಯಚೂರು,ಜ.2–**ಶಕ್ತಿನಗರ ಪೊಲೀಸ್ ಠಾಣೆ ಗುನ್ನೆ ನಂ.38/2025 ಕಲಂ: ಮನುಷ್ಯ ಕಾಣೆ/ ಗು.ನ:54/2025 ಕಲಂ: 137(2) ಬಿ.ಎನ್.ಎಸ್ ಪ್ರಕರಣದಲ್ಲಿ ಕಾಣೆಯಾದ/ಅಪಹರಣಕ್ಕೊಳಗಾದ ವ್ಯಕ್ತಿಯನ್ನು ಪತ್ತೆ ಮಾಡುವ ಕುರಿತು ರಾಯಚೂರು ಗ್ರಾಮೀಣ ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರು ಪ್ರಕಟಣೆ ಹೊರಡಿಸಿದ್ದಾರೆ.

ಕಾಣೆಯಾದ/ಅಪಹರಣಕ್ಕೊಳಗಾದ ಜಮಶೇರ್ ಅಲಿ ತಂದೆ ಅಕ್ಟರ್ ಸಾಬ್ (ವಯಸ್ಸು 35) ಮುಸ್ಲಿಂ ಜಾತಿಗೆ ಸೇರಿದ್ದು, ಆರ್‌ಟಿಪಿಎಸ್‌ನಲ್ಲಿ ಟೇಕ್ನಿಷಿಯನ್ ಕೆಲಸ ಮಾಡುತ್ತಿದ್ದು, ಗೋಧಿ ಮೈಬಣ್ಣ, ಕೋಲು ಮುಖ ಚಹರೆ ಹೊಂದಿದ್ದಾನೆ. ಕೆಂಪು ಬಣ್ಣದ ಟಿ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಹಿಂದಿ ಕನ್ನಡ ತೆಲುಗು ಮಾತನಾಡುತ್ತಾನೆ. 5.8 ಅಡಿ ಎತ್ತರ ಇದ್ದು, ತೆಳ್ಳನೆಯ ಮೈಕಟ್ಟು ಹೊಂದಿದ್ದಾನೆ. ಈತನ ಬಗ್ಗೆ ಸುಳಿವು ಸಿಕ್ಕಲ್ಲಿ

ಶಕ್ತಿನಗರ ಪೊಲೀಸ್ ಠಾಣೆ ಪಿಎಸ್‌ಐ ಮೊಬೈಲ್ ಸಂಖ್ಯೆ: 9480803868, ರಾಯಚೂರು ಗ್ರಾಮೀಣ ವೃತ್ತದ ಸಿಪಿಐ ಮೊಬೈಲ್ ಸಂಖ್ಯೆ: 9480803832ಗೆ ಸಂಪರ್ಕಿಸುವಂತೆ ಗ್ರಾಮೀಣ ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರ ಕಚೇರಿಯ ಪ್ರಕಟಣೆ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ದಿನಾಂಕ 10.10.2025 ರಂದು ರಾತ್ರಿ 11.00 ಗಂಟೆಗೆ ಮುಂದುವರೆದು ಪುನಃ ಫಿರ್ಯಾದಿರರಾದ ಶ್ರೀಮತಿ ಶಾಜಿಯಾ ಗಂಡ ಜೇಮಶೇರ್ ಅಲಿ, ವಯಾ: 30 ವರ್ಷ, ಜಾತಿ: ಮುಸ್ಲಿಂ, ಉ, ಮನೆಕೆಲಸ, ಸಾ: ಪಾರ್ವತಿ ನಗರ ದೇವಸ್ಗೂರು, ಇವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಹಾಜರು ಪಡಿಸಿ ಈ ಮೊದಲು ಫಿರ್ಯಾದಿದಾರರು ದಿನಾಂಕ: 22.06.2025 ರಂದು ತಮ್ಮ ಗಂಡ ಜೇಮಶೀರ ಅಲಿ ಕಾಣೆಯಾಗಿರುತ್ತಾನೆ ಅಂತಾ ನೀಡಿದ ದೂರಿನ ಮೇರೆಗೆ ಠಾಣಾ ಗುನ್ನ ಸಂಖ್ಯೆ ನಂ 38/2025 ಕಲಂ ಮನುಷ್ಯ ಕಾಣೆ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು ನಂತರ ಫಿರ್ಯಾದಿದಾರರಿಗೆ ಸಾಕ್ಷಿದಾರರಿಂದ ಬಂದ ಮಾಹಿತಿಯ ಆಧಾರದ ಮೇಲಿಂದ ದಿನಾಂಕ: 20.06.2025 ರಂದು ರಾತ್ರಿ ಕಾಣೆಯಾದ ವ್ಯಕ್ತಿಯನ್ನು ಆರೋಪಿತನೇ ತನ್ನ ಬೈಕ್ ಮೇಲೆ ಕೃಷ್ಣಾ ನದಿಯ ಬ್ರಿಜ್ ಮೇಲೆ ಕುಡಿಯಲು ಕರೆದುಕೊಂಡು ಹೋಗಿದ್ದು ಇಬ್ಬರು ಕೂಡಿ ಕುಡಿದ ನಂತರ ಇದ್ದಕ್ಕಿದ್ದಂತೆ ಆರೋಪಿತನಿಗೆ ಕಾಣೆಯಾದ ವ್ಯಕ್ತಿ ಕಾಣಲಿಲ್ಲ ಅಂತಾ ಅಸಂಬದ್ಧವಾಗಿ ಮಾತಾನಾಡಿದ್ದರಿಂದ ಆರೋಪಿತನು ಯಾವುದೋ ದುರುದ್ದೇಶದಿಂದ ಕಾಣೆಯಾದ ವ್ಯಕ್ತಿಯನ್ನು ಅಪಹರಣ ಮಾಡಿಕೊಂಡು ಹೋಗಿದ್ದು ಈ ಆರೋಪಿತನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಕಾಣೆಯಾದ ವ್ಯಕ್ತಿಯನ್ನು ಹುಡುಕಿಕೊಡಲು ವಿನಂತಿ ಅಂತಾ ಮುಂತಾಗಿ ನೀಡಿದ ದೂರಿನ ಸಾರಾಂಶದ ಮೇಲಿಂದ ಶ್ರೀ ನಾರಾಯಣ ಪಿ.ಎಸ್.ಐ. ಶಕ್ತಿನಗರ ಪೊಲೀಸ್ ಠಾಣೆ ಅವರು ಠಾಣಾ ಗುನ್ನೆ ಸಂಖ್ಯೆ 54/2025 ಕಲಂ-137(2) ಬಿ.ಎನ್.ಎಸ್ -2025 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ. ಶಕ್ತಿನಗರ ಪೊಲೀಸ್ ಠಾಣೆ ಅಪರಾಧ ಸಂ.38/2025 ಕಲಂ:ಮನುಷ್ಯ ಕಾಣೆ ಹಾಗೂ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಗುನ್ನೆ ನಂ.54/2025 ಕಲಂ:137(2) ಬಿ.ಎನ್.ಎಸ್. ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಜಮಶೇರ್ ಅಲಿ ತಂದೆ ಅಕ್ಟರ್ ಸಾಬ್, ವಯಾ: 35 ವರ್ಷ, ಉ: ಕೆಪಿಸಿಯಲ್ಲಿ ಟೇಕ್ನಿಷಿಯನ್, ಸಾ: ಪಾರ್ವತಿ ನಗರ ದೇವಸೂರು ಈತನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಅವರ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ:ಡಬ್ಲು ಪಿಎಚ್‌ಸಿ/0200017/2025 ರ ಪ್ರಕಾರ ಹೇಬಿಯಸ್ ಕಾರ್ಪಸ್ ಹಾಕಿಕೊಂಡಿದ್ದು, ಮಾನ್ಯ ನ್ಯಾಯಾಲಯವು ಸದರಿಯವರನ್ನು ಪತ್ತೆ ಮಾಡಿ ಕರೆತಂದು ಹಾಜರುಪಡಿಸುವಂತೆ ಆದೇಶಿಸಿದ್ದು ಇರುತ್ತದೆ. ಆದ್ದರಿಂದ ಕಾಣೆಯಾಗಿರುವ/ಅಪಹರಣಕ್ಕೊಳಗಾದ ಜಮಶೀರ್ ಅಲಿ ಈತನ ಪತ್ತೆ ಮಾಡುವ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ ಎಂದು ರಾಯಚೂರು ಗ್ರಾಮೀಣ ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಸಕ ಜನಾರ್ಧನ ರೆಡ್ಡಿಯವರನ್ನು ಟಾರ್ಗೆಟ್ ಮಾಡಿ ಗುಂಡು ಹಾರಿಸಲಾಗಿದೆ : ಆರ್.ಅಶೋಕ್

**ಬೆಂಗಳೂರು,ಜ.2**–ಶಾಸಕ ಜನಾರ್ಧನ ರೆಡ್ಡಿಯುನ್ನು ಗುರಿಯಾಗಿಟ್ಟುಕೊಂಡು ಗುಂಡು ಹಾರಿಸಲಾಗಿದೆ. ಈ ಗಲಭೆಗೆ ಕಾರಣೀಭೂತರಾದ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಅವರ ಆಪ್ತನನ್ನು ತಕ್ಷಣವೇ ಸರ್ಕಾರ ಬಂಧಿಸಿ ಜೈಲಿಗೆ ಹಾಕಬೇಕೆಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಬಳ್ಳಾರಿಯಲ್ಲಿ ಕಳೆದ ರಾತ್ರಿ ನಡೆದ ಗಲಭೆಗೆ ಶಾಸಕ ನಾರಾ ಭರತ್ ರೆಡ್ಡಿ ಅವರ ಆಪ್ತ ಸತೀಶ್ ರೆಡ್ಡಿ ಹಾಗೂ ಬೆಂಬಲಿಗರು ಕಾರಣಕರ್ತರು ಎಂಬುದರಲ್ಲಿ ಯಾವುದೇ ಅನುಮಾನವೇ ಇಲ್ಲ. ರಾಜಕೀಯವಾಗಿ ಬೆಳೆಯುತ್ತಿರುವ ಜನಾರ್ದನ ರೆಡ್ಡಿ ಅವರನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ್ದಾರೆ ಎಂದು ದೂರಿದರು. ವಿಧಾನಸೌಧದಲ್ಲಿ ವಿಧಾನಪರಿಷತ್‌ನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಅವರು, ರೆಡ್ಡಿ ಅವರನ್ನು ಗುರಿಯಾಗಿಟ್ಟುಕೊಂಡು ಗುಂಡು ಹಾರಿಸಲಾಗಿತ್ತು. ಆದರೆ ಅದು ಕಾಂಗ್ರೆಸ್ ಕಾರ್ಯಕರ್ತನಿಗೆ ತಗಲಿದ್ದರಿಂದ ಸಾವನ್ನಪ್ಪಿದ್ದಾನೆ ಎಂದು ಆರೋಪ ಮಾಡಿದರು.

ಬಳ್ಳಾರಿಯಲ್ಲಿ ವ್ಯಕ್ತಿ ಸಾವಿಗೆ ಭರತ್ ರೆಡ್ಡಿಯೇ ಕಾರಣ. ತಕ್ಷಣವೇ ಸರ್ಕಾರ ಗೂಂಡಾ ಕಾಯ್ದೆಯಡಿ ಅವರನ್ನು ಬಂಧಿಸಿ ಪ್ರಕರಣದ ಸತ್ಯಾಸತ್ಯತೆ ಹೊರಬರಲು ನ್ಯಾಯಾಂಗ ತನಿಖೆ ನಡೆಸಬೇಕು. ಜೊತೆಗೆ ರೆಡ್ಡಿ ಮತ್ತು ರಾಮುಲುಗೆ ಸರ್ಕಾರ ರಕ್ಷಣೆ ಕೊಡಬೇಕೆಂದು ಮನವಿ ಮಾಡಿದರು. ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿ, ಶ್ರೀರಾಮುಲು ಮೇಲೆ ಗುಂಡಿನ ದಾಳಿ ಆಗಿದೆ. ಫೈರಿಂಗ್ ಆಗಿರುವುದು ರಾಜ್ಯದ ಕಾನೂನು ಸುವ್ಯವಸ್ಥೆ ಹೇಗಿದೆ ಎಂಬುದನ್ನು ತೋರಿಸುತ್ತದೆ. ಆಂಧ್ರದ ರಕ್ತಚರಿತ್ರೆ ಬಳ್ಳಾರಿಗೂ ಕಾಲಿಟ್ಟಿದೆ. ಸಿದ್ದರಾಮಯ್ಯ ಆಗ ತೊಡೆ ತಟ್ಟಿ ಬಳ್ಳಾರಿ ರಿಪಬ್ಲಿಕ್ ಅಂದಿದ್ದರು. ಈಗ ಬಳ್ಳಾರಿ ಕಾಂಗ್ರೆಸ್ ರಿಪಬ್ಲಿಕ್ ಆಗಿದೆಯಾ? ಎಂದು ಪ್ರಶ್ನಿಸಿದರು.

ನಿನ್ನೆ ರಾತ್ರಿ ರೆಡ್ಡಿಯವರ ಮನೆ ಮುಂದೆ ಗುಂಪು ಕಟ್ಟಿಕೊಂಡು ಬಂದಿದ್ದರು. ಸತೀಶ್ ರೆಡ್ಡಿ, ಜನಾರ್ದನ ರೆಡ್ಡಿ ಮನೆ ಮುಂದೆನೇ ಕಾಲು ಮೇಲೆ ಕಾಲು ಹಾಕಿ ಕೂತು ಬ್ಯಾನರ್ ಕಟ್ಟಿಸುತ್ತಿದ್ದ. ಕಾಂಗ್ರೆಸ್‌ನವರೇ ಗುಂಡು ಹಾರಿಸಿ ಜನಾರ್ದನ ರೆಡ್ಡಿ ಮೇಲೆ ಹಾಕಿದ್ದಾರೆ. ಜನಾರ್ದನ ರೆಡ್ಡಿ ಮೇಲೆ ಹಲ್ಲೆ ಮಾಡಬೇಕು, ಹತ್ಯೆ ಮಾಡಬೇಕು ಅಂತಾನೆ ಕಾಂಗ್ರೆಸ್‌ನವರು ಬಂದಿದ್ದರು. ಇದು ಪೂರ್ವಯೋಜಿತ ಕೃತ್ಯ ಎಂದು ದೂರಿದರು.

ಕಾಂಗ್ರೆಸ್‌ನವರೇ ಹತ್ಯೆಗೆ ಯತ್ನ ಮಾಡಿದ್ದಾರೆ. ಆ ವ್ಯಕ್ತಿ ಸಾವನ್ನು ರೆಡ್ಡಿ ತಲೆ ಮೇಲೆ ಹಾಕುತ್ತಿದ್ದಾರೆ. ಈಗ ಮಿಸ್ ಫೈರ್ ಅಂತಿದ್ದಾರೆ. ಇಲ್ಲಿಂದಲೂ ಕಾಲ್ ಹೋಗಿರಬೇಕು, ಮಿಸ್‌ಫೈರ್ ಎಂದು ಹೇಳಲಿಕ್ಕೆ. ರಾಜ್ಯದಲ್ಲಿ ಸಿಎಂ ಇದ್ದಾರಾ? ಇಲ್ವಾ? ಎಂದು ಪ್ರಶ್ನಿಸಿದರು. ಗುಂಡು ಹಾರಿಸುವ ಸಂಪ್ರದಾಯಕ್ಕೆ ಸಿಎಂ ಪ್ರೋತ್ಸಾಹ ಕೊಟ್ಟಂತಿದೆ. ಗೂಂಡಾ ರಾಜ್ಯ ಮಾಡುತ್ತಿದ್ದಾರೆ. ರಾಜಕೀಯವಾಗಿ ಗುಂಡು ಹಾರಿಸುವುದು ನಡೆದಿಲ್ಲ. ಹೊಸ ರಕ್ತ ಚರಿತ್ರೆಗೆ ಸಿಎಂ ನಾಂದಿ ಹಾಡಿದ್ದಾರೆ. ಕಾಂಗ್ರೆಸ್‌ನವರು ಗೂಂಡಾಗಿರಿ ಮಾಡುತ್ತಿದ್ದಾರೆ. ಜನಾರ್ದನ ರೆಡ್ಡಿ ಮೇಲಿನ ಫೈರಿಂಗ್‌ನ್ನು ಖಂಡಿಸುತ್ತೇವೆ ಎಂದರು.

ಸರ್ಕಾರ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು. ಈ ಗೂಂಡಾ ಸಂಸ್ಕೃತಿ ಬೇರೆ ಜಿಲ್ಲೆಗೆ ಕಾಲಿಡದಂತೆ ನೋಡಿಕೊಳ್ಳಬೇಕು. ಜನಾರ್ದನ ರೆಡ್ಡಿ ಮನೆ ಬಳಿಗ ಏಕೆ ಕಾಂಗ್ರೆಸ್‌ನವರು ಹೋಗಬೇಕಿತ್ತು? ಪೊಲೀಸರು ಬಂದರೂ ಯಾಕೆ ಗೂಂಡಾಗಳು ಹೋಗಲಿಲ್ಲ? ಎಂದು ಪ್ರಶ್ನಿಸಿದರು.

ಏನೂ ಇಲ್ಲದೇ ಜನಾರ್ದನ ರೆಡ್ಡಿ ಮೇಲೆ ಯಾಕೆ ದೂರು ದಾಖಲಾಗಿದೆ. ನಮ ರಾಜ್ಯ ನಾಯಕ ಶ್ರಿರಾಮುಲು ಅವರನ್ನೂ ಗೂಂಡಾಗಳು ತಳ್ಳಿದ್ದಾರೆ. ಬಳ್ಳಾರಿ ರಕ್ತ ಚರಿತ್ರೆಯಿಂದ ಈ ವರ್ಷ ಪ್ರಾರಂಭವಾಗಿದೆ ಎಂದರು. ಈ ಘಟನೆ ಶುರುವಾದಾಗ ರೆಡ್ಡಿಯವರು ಮನೆಯಲ್ಲಿ ಇರಲೇ ಇಲ್ಲ. ಸತೀಶ್ ರೆಡ್ಡಿ, ಭರತ್ ರೆಡ್ಡಿ ಹಿನ್ನೆಲೆಯೇ ಅಪರಾಧ ಹಿನ್ನೆಲೆಯದ್ದು ಮೊದಲಿಂದಲೂ ಗಲಾಟೆ ದೊಂಬಿಯಲ್ಲೆ ಭಾಗವಹಿಸಿಕೊಂಡು ಬಂದವರು ಅಶೋಕ್ ಆರೋಪಿಸಿದರು.ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ಭರತ್ ರೆಡ್ಡಿ ಕಡೆಯಿಂದ ಗಲಭೆ ಶುರುವಾಗಿದೆ. ಬ್ಯಾನರ್ ಕಟ್ಟುವಾಗ ಮನೆಯಲ್ಲಿ ರೆಡ್ಡಿಯವರು ಇರಲೇ ಇಲ್ಲ. ಶ್ರೀರಾಮುಲು ಅವರು ಬಂದು ಕೇಳುತ್ತಾರೆ. ನಂತರ ಪೊಲೀಸರು ಬ್ಯಾನರ್ ತೆರವು ಮಾಡುತ್ತಾರೆ. ಬಳಿಕ ಸತೀಶ್ ರೆಡ್ಡಿ ಕುರ್ಚಿಯಲ್ಲಿ ಕೂತು ಬ್ಯಾನರ್ ಕಟ್ಟಿಸುತ್ತಾನೆ. ಇದು ದೂಂಡಾವರ್ತನೆ ಅಲ್ಲವೇ?




ಈರೀತಿ ಮಾಡಿದ ಮೇಲೆ ಗಲಭೆ ವಿಕೋಪಕ್ಕೆ ಹೋಯಿತು. ಶ್ರೀರಾಮುಲು ಕೇಳಲು ಹೋಗಿದ್ದರೆ ಅವರನ್ನೂ ತಳ್ಳಿದ್ದಾರೆ. ಗಲಭೆ ಮಾಡಲೆಂದೇ ಪೂರ್ವನಿಯೋಜನೆ ಮಾಡಿಕೊಂಡು ಕಾಂಗ್ರೆಸ್‌ನವರು ಹೋಗಿದ್ದರು ಎಂದು ಕಿಡಿಕಾರಿದರು.

ದೂರು ಯಾರ ಮೇಲೆ ದಾಖಲಾಗಬೇಕಿತ್ತು? ರೆಡ್ಡಿ, ರಾಮುಲು ಗುಂಡು ಹಾರಿಸಿದ್ದರಾ? ಅವರಿಗೆ ಸಂಬಂಧವೇ ಇಲ್ಲ. ರೆಡ್ಡಿ, ರಾಮುಲು ಟಾರ್ಗೆಟ್ ಮಾಡಿ ದೂರು ದಾಖಲಿಸಿದ್ದಾರೆ. ಇನ್ನೂ ಕಾಂಗ್ರೆಸ್‌ನ ಯಾರನ್ನೂ ಬಂಧಿಲ್ಲ, ಅಂದರೆ ಇದು ಸರ್ಕಾರದ ಪ್ರಾಯೋಜಕತ್ವದ ದಾಳಿಯೇ ಎಂದು ವಾದಿಸಿದರು.

ಈ ಗಲಭೆ ನಡೆದಿದ್ದು ಕಾಂಗ್ರೆಸ್‌ನಿಂದಲೇ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಮಾತ್ರ ಅಲ್ಲ, ವಿಕೋಪಕ್ಕೆ ಹೋಗಿದೆ. ಇದು ಸರ್ಕಾರಿ ಪ್ರಾಯೋಜಕತ್ವದ ದಾಳಿ. ರೆಡ್ಡಿ ಅವರು ಫೈರಿಂಗ್‌ನಿಂದ ಬಚಾವ್ ಆದರು. ಇಲ್ಲದಿದ್ದರೆ ರೆಡ್ಡಿಯವರ ದೇಹ ಅಲ್ಲಿರುತ್ತಿತ್ತು.

## ಕಾನೂನು ಅರಿವು ಪ್ರತಿಯೊಬ್ಬರ ಜವಾಬ್ದಾರಿ: ನ್ಯಾಯಾಧೀಶೆ ಸುಮನ ಚಿತ್ತರಗಿ



**ಆಳಂದ:ಜ.2:** ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಹೊಣೆಗಾರಿಕೆ ಮಾತ್ರವಲ್ಲ, ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ಕಾನೂನು ಅರಿವು ಹೊಂದಿದಾಗ ಮಾತ್ರ ಸುಸ್ಥಿರ ಹಾಗೂ ಸುರಕ್ಷಿತ ಭವಿಷ್ಯವನ್ನು ನಿರ್ಮಿಸಲು ಸಾಧ್ಯ ಎಂದು ಸ್ಥಳೀಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶೆ ಸುಮನ ಚಿತ್ತರಗಿ ಹೇಳಿದರು.

ಪಟ್ಟಣದ ಸರ್ಕಾರಿ ಕನ್ಯಾ ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ ಹಾಗೂ ಪುರಸಭೆಯ ಆಶ್ರಯದಲ್ಲಿ ಹಮ್ಮಿಕೊಂಡ 'ಇಂದು ರಕ್ಷಿಸಿ ನಾಳೆ ಸುರಕ್ಷಿತ ಪರಿಸರ' ಕಾನೂನು ಸಾಕ್ಷರತೆ ಮತ್ತು ಸಮುದಾಯ ಸಂರಕ್ಷಣಾ ಉಪಕ್ರಮದ ಅನುಷ್ಠಾನ ಅಂಗವಾಗಿ ನಡೆದ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು,

ಪರಿಸರ ಹಾನಿಯಿಂದ ಮಾನವ ಜೀವನದ ಮೇಲೆ ಬೀರುವ ದುಷ್ಪರಿಣಾಮಗಳನ್ನು ವಿವರಿಸಿದರು. ಪರಿಸರ ಕಾನೂನುಗಳ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಅರಿವು ಪಡೆದು, ಅವುಗಳನ್ನು ದೈನಂದಿನ ಜೀವನದಲ್ಲಿ ಅನುಸರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಪನಶೆಟ್ಟಿ ಮಾತನಾಡಿ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ ಹಾಗೂ ಹಸಿರು ಪರಿಸರ ನಿರ್ಮಾಣಕ್ಕೆ ಪುರಸಭೆ ಹಲವು ಕ್ರಮಗಳನ್ನು ಕೈಗೊಂಡಿದ್ದು, ಜನರ ಸಹಕಾರ ಅತ್ಯಂತ ಅಗತ್ಯ ಎಂದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಕಮಲ ರಾಠೋಡ ಅವರು ಕಾನೂನು ಸೇವಾ ಸಮಿತಿಯ ಮೂಲಕ ನೀಡಲಾಗುತ್ತಿರುವ ಉಚಿತ ಕಾನೂನು ನೆರವು ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾನೂನುಗಳ ಮಹತ್ವವನ್ನು ವಿವರಿಸಿದರು.

ಶಾಲೆಯ ಮುಖ್ಯ ಶಿಕ್ಷಕ ಶ್ರೀಮಂತ ಹತ್ತರಕಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಪರಿಸರ ಪ್ರಜ್ಞೆ ಮತ್ತು ಕಾನೂನು ಅರಿವು ಬೆಳೆಸಿದರೆ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಉಪನ್ಯಾಸಕರಾಗಿ ನ್ಯಾಯವಾದಿ ದೇವಾನಂದ ಹೋದಲೂರಕರ್ 'ಇಂದು ರಕ್ಷಿಸಿ ನಾಳೆ ಸಂರಕ್ಷಿಸಿ ಸುರಕ್ಷಿತ ಪರಿಸರ' ವಿಷಯವಾಗಿ ಉಪನ್ಯಾಸ ನೀಡಿ, ಪರಿಸರ ಕಾನೂನುಗಳು, ನಾಗರಿಕರ ಹಕ್ಕು–ಕರ್ತವ್ಯಗಳು ಹಾಗೂ ಪರಿಸರ ಅಪರಾಧಗಳ ವಿರುದ್ಧ ಕೈಗೊಳ್ಳಬಹುದಾದ ಕಾನೂನು ಕ್ರಮಗಳ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಸರ್ಕಾರಿ ವಕೀಲ ಇಸ್ಲಾಲ ಪಟೇಲ್, ಜೋತಿ ಬಂದಿ, ನ್ಯಾಯವಾದಿಗಳ ಸಂಘದ ಕಾರ್ಯದರ್ಶಿ ಬಲಭೀಮ ಸಿಂದೆ, ಶಾಲೆಯ ಸಹ ಶಿಕ್ಷಕ ಮಲ್ಲಿಕಾರ್ಜುನ ಖಜೂರಗಿ, ನ್ಯಾಯವಾದಿ ಬಿ.ಜಿ. ಬೀಳಗಿ, ಮಹಾದೇವ ಹತ್ತಿ ಸೇರಿದಂತೆ ಶಾಲಾ ಸಿಬ್ಬಂದಿಗಳು, ನ್ಯಾಯವಾದಿಗಳು ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸುದೀರ ಪಡಶಟ್ಟಿ ನಿರೂಪಿಸಿದ್ದು, ಸಂಗಣ್ಣಾ ಕೆರಮಗಿ ವಂದಿಸಿದರು.

## ವಾಹನ ಸವಾರರು ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮ ಪಾಲಿಸಿ : ಆರ್‌ಟಿಓ ಜಾಫರ್ ಸಾಧಿಕ್



**ಹುಮನಾಬಾದ್:ಜ.2:** ತಮ್ಮ, ತಮ್ಮ ಸುರಕ್ಷತೆ ಮತ್ತು ಜೀವ ರಕ್ಷಣೆಗೆ ವಾಹನ ಸವಾರರೂ ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮ ಪಾಲಿಸಬೇಕು ಎಂದು ಭಾಲ್ಕಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಾಫರ್ ಸಾಧಿಕ್ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಭಾಲ್ಕಿ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಗುರುವಾರ ನಡೆದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ, ಜಾಗೃತಿ ಮಾಸಾಚಾರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಸ್ತೆ ಅಪಘಾತ ತಡೆಯಲು ಎಲ್ಲರ ಸಹಕಾರ ಅಗತ್ಯ, ಸಾರಿಗೆ ನಿಯಮಗಳನ್ನು ಅರಿತುಕೊಂಡು ಅವುಗಳನ್ನು ಪಾಲನೆ ಮಾಡಬೇಕು, ವಾಹನ ಚಲಾವಣೆ ಮಾಡುವಾಗ ಎಲ್ಲ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಂಡಿರಬೇಕು. ಮನೆಯಿಂದ ಹೊರ ಬರಬೇಕಾದರೆ ದಾಖಲೆಗಳನ್ನು ಒಂದು ಸಲ ನೋಡಿಕೊಳ್ಳಬೇಕು. ಸಕಾಲಕ್ಕೆ ದಾಖಲೆಗಳನ್ನು ನವೀಕರಣ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಅಪಘಾತದಲ್ಲಿ ಮೊದಲು ತಲೆಗೆ ಪೆಟ್ಟಾಗುತ್ತದೆ, ಹೀಗಾಗಿ ಬೈಕ್ ಸವಾರರು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಹೆಲ್ಮೆಟ್ ಖರೀದಿ ಮಾಡಿ ಧರಿಸಬೇಕು. ವಾಹನ ಚಲಾಯಿಸುವಾಗ ಹೆಡ್ ಫೋನ್, ಮೊಬೈಲ್ ಬಳಸಬಾರದು. ಕುಡಿದು ವಾಹನ ಓಡಿಸಬಾರದು, ಮುಖಾಮುಖಿ, ಹಿಂಬದಿಯಿಂದ, ಎದುರುಗಡೆಯಿಂದ ಬರುವ ವಾಹನದಿಂದ ರಸ್ತೆ ಅಪಘಾತ ಉಂಟಾಗುತ್ತದೆ, ತಡೆಗಟ್ಟಲು ಕಡ್ಡಾಯವಾಗಿ ರಸ್ತೆ ನಿಯಮಗಳನ್ನು ಪಾಲಿಸಿಬೇಕು. ಎಂದರು, ಪ್ರವೇಶ ನಿಷೇಧ, ಎಡಕ್ಕೆ ತೀರುಗಿ, ಪ್ರದೇಶ ನಿಷೇಧಿಸಲಾಗಿದೆ ಎಂಬ ಫಲಕಗಳನ್ನು ನೋಡಿ ಅರಿತು ಅದರಂತೆ ನಡೆದು ತಲೆಗೆ ಹೆಲ್ಮಟ್ ಧರಿಸಿ ವಾಹನ ಚಾಲಾಯಿಸಿದರೆ ರಸ್ತೆಯ ಅಪಘಾತ ಮತ್ತು ಸಾವು ನೋವುಗಳನ್ನು ತಡೆಗಟ್ಟಬಹುದಾಗಿದೆ, ಎಂದು ಹೇಳಿದರು. ಈ ಸಂದರ್ಭದಲ್ಲಿ ವಾಹನ ಚಾಲನಾ ತರಬೇತಿ ಕೇಂದ್ರದ ಪ್ರಮುಖರು, ವಾಹನ ಸವಾರರೂ ಇದ್ದರು.

## ಆರೋಗ್ಯಕರ ಬದುಕಿಗೆ ಉತ್ತಮ ಪರಿಸರ ಅಗತ್ಯ



**ಯಾದಗಿರಿ:ಜ.2:** ಮಾಜಿ ಪ್ರಧಾನಿ, ಭಾರತರತ್ನ, ಅಪ್ರತಿಮ ದೇಶಭಕ್ತ, ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೀ ಅವರ ಜನ್ಮದಿನದ ಅಂಗವಾಗಿ ಸ್ಟೇಷನ್ ಬಜಾರ್ ಸರ್ಕಾರಿ ಪ್ರೌಢಶಾಲೆಯ ಮೈದಾನದಲ್ಲಿ ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರ ನೇತೃತ್ವದಲ್ಲಿ ಸಸಿ ನೆಟ್ಟು ಒಂದೊಂದು ಸಸಿಗೂ ಒಬ್ಬ ವಿದ್ಯಾರ್ಥಿಯನ್ನು ನೇಮಿಸಿ ಆ ಸಸಿಯನ್ನು ಸಂರಕ್ಷಿಸಲು ತಿಳಿಸಿ ಮಾತನಾಡಿದ ಅವರು ಇಂದಿನ ದಿನಮಾನಗಳಲ್ಲಿ ಆರೋಗ್ಯಕರ ಬದುಕನ್ನು ನಡೆಸಲು ಉತ್ತಮ ಜೀವನ ಶೈಲಿಯೊಂದಿಗೆ ಸ್ವಚ್ಛ ಹಾಗೂ ಉತ್ತಮ ಪರಿಸರ ಅತಿ ಅಗತ್ಯವಾಗಿದ್ದು, ಅದಕ್ಕಾಗಿ ನಾವು ಮರ ಗಿಡಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವ ಮೂಲಕ ಪ್ರಕೃತಿಗೆ ನಮ್ಮ ಕೊಡುಗೆ ನೀಡುವುದು ಪ್ರತಿಯೊಬ್ಬರ ಕರ್ತವ್ಯ, ದಿನೇ ದಿನೇ ಹೆಚ್ಚುತ್ತಿರುವ ಭೂಮಿಯ ತಾಪಮಾನವನ್ನು ಕಡಿಮೆ ಮಾಡಲು ಹಾಗೂ ಹಸಿರನ್ನು ಹೆಚ್ಚಿಸಿ ಶುದ್ಧ ಗಾಳಿಯನ್ನು ಪಡೆಯಲು ಪ್ರತಿಯೊಬ್ಬ ಮಗು, ಪ್ರತಿಯೊಬ್ಬ ನಾಗರಿಕರು ಮರಗಿಡಗಳನ್ನು ನೆಟ್ಟು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ ಎಂದರು..

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ಯುವಮುಖಂಡ ಮಹೇಶ್ ರೆಡ್ಡಿ ಮುದ್ನಾಳ್, ಸ್ಟೇಷನ್ ಬಜಾರ್ ಶಾಲೆಯ ಮುಖ್ಯೋಪಾಧ್ಯಾಯರಾದ ಮಲ್ಲಿಕಾರ್ಜುನ ಪೂಜಾರಿ, ಹಿರಿಯ ಮುಖಂಡರಾದ ಸಿದ್ದಣ್ಣಗೌಡ ಕಾಡಮ್ಮನೂರ್, ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟರೆಡ್ಡಿ ಅಬ್ಬೆತುಮಕೂರ್, ಜಿಲ್ಲಾ ಉಪಾಧ್ಯಕ್ಷ ಪ್ರಭಾವತಿ ಕಲಾಲ್, ಜಿಲ್ಲಾ ಕಾರ್ಯದರ್ಶಿ ವಿಜಯಲಕ್ಷ್ಮೀ ನಾನೇಕ್, ಮಲ್ಲಿಕಾರ್ಜುನ್ ಹೊನೆಗೆರ, ಶಕುಂತಲಾ ಗುಜಲೂರು, ಭೀಮಬಾಯಿ ಶೇಂಡಗಿ, ರಮಾದೇವಿ ಕವಲಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ರಾಚಯ್ಯ ಸ್ವಾಮಿ, ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾದ ಸಿ. ಮಲ್ಲು ಕೋಲಿವಾಡ, ಮಂಜುನಾಥ್ ಗುತ್ತೇದಾರ, ಅನಿಲ್ ಕರಾಟೆ, ಹಣಮಂತ ವಲ್ಯಾಪುರೆ, ವಿಕಾಸ್ ಚವ್ಹಾಣ,ಮರಲಿಂಗ ಜಿನಿಕೇರಿ, ವಿಶ್ವನಾಥ ಅಬ್ಬೆತುಮಕೂರ್, ತಿರುಪತಿ ಗುಂಡಳ್ಳಿ, ವಿಶ್ವನಾಥ ಜಾಕನಹಳ್ಳಿ, ಭೀಮು ದೇಸಾಯಿ, ಸಲ್ಲು ದಂಡಿನ್, ಸುನಿಲ್ ಕಡೇಚೂರು, ಶಿವು ಪಾಗಲಾಪುರ್, ಸೇರಿದಂತೆ ಶಾಲೆಯ ಶಿಕ್ಷಕರು ಮುದ್ದು ಮಕ್ಕಳು ಉಪಸ್ಥಿತರಿದ್ದರು..

## ಸ್ಪಂದನಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ 2026 ನೇ ಕ್ಯಾಲೆಂಡರ್ ಬಿಡುಗಡೆ ಗ್ರಾಹಕರು,ಶೇರುದಾರರು ಹಾಗೂ ಸಿಬ್ಬಂದಿಗಳ ಪರಿಶ್ರಮವಿದೆ: ಚನ್ನಪ್ಪ ಪೈಕಾರ

ಯುವಮಾರ್ಗ ಸುದ್ದಿ

**ಅರಕೇರಾ,ಜ.2–** ಪಟ್ಟಣದಲ್ಲಿನ ಗಲಗ ರಸ್ತೆಯಲ್ಲಿ ಸ್ಪಂದನಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಅರಕೇರಾದಲ್ಲಿ ನೂತನ 2026 ನೇ ವರ್ಷದ ಕ್ಯಾಲೆಂಡರ್‌ನ್ನು ಸಹಕಾರಿ ಅಧ್ಯಕ್ಷ ಚನ್ನಪ್ಪ ಪೈಕಾರ ಬಿಡುಗಡೆಗೊಳಿಸದರು.

ಈ ಸಂದರ್ಭದಲ್ಲಿ ಮಾತನಡಿದ ಅವರು ಸಹಾರಿ ಸಂಘವು ಆರಂಭಗೊಂಡು 10 ವರ್ಷಪೂರ್ಣಗೊಂಡು ನಮ್ಮ ಸಹಕಾರಿ ಸಂಘವು ಉತ್ತಮ ಸಾಲಗಳನ್ನು ನೀಡುವುದರ ಜತೆಗೆ ಸಹಕಾರದೊಂದಿಗೆ ಉತ್ತಮ ಠೇವಣಿ ಸಂಗ್ರಹಿಸಿದೆ. ಗ್ರಾಹಕರು,ಶೇರುದಾರರು ಹಾಗೂ ಸಿಬ್ಬಂದಿಗಳ ಪರಿಶ್ರಮವಿದೆ. ಸಹಕಾರಿ ಸಂಘದ ಮೇಲಿನ ವಿಶ್ವಾಸದಿಂದ ವರ್ಷದಿಂದ ವರ್ಷಕ್ಕೆ ಸಹಕಾರಿಯು ಪ್ರಗತಿಹೊಂದಿದೆ ಎಂದರು.

ಸಂಧರ್ಭದಲ್ಲಿ ಚನ್ನವೀರಯ್ಯಸ್ವಾಮಿ ಹಿರೇಮಠ, ಪರಮೇಶಪೂಜಾರಿ.ಮಹೇಶಸ್ವಾಮಿ ಗಣೇಚಾರ್ಯ ಉಪಾಧ್ಯಕ್ಷರಾದ ಶಿವುಕುಂಆರ ಮಾದ್ವರ, ನಾಗರಾಜನಾಯಕ .ಅಯುಬಸಾಬ,



ರೈಮನಸಾಬ ಖಾಜಿ. ಶಂಕ್ರಪ್ಪನಾಯಕ ಬಿ.ಸುರೇಶಗೌಡ ಕುರುಕುಂದಿ, ವೆಂಕಟೇಶನಾಯಕ, ಶಿವುಕಬ್ಬೇರ,ಚಾಂದಪಾಷ, ನಿರ್ದೇಶಕರು ಸೇರಿದಂತೆ ವ್ಯವಸ್ಥಾಪಕರಾದ ವಿರುಪಾಕ್ಷನಾಯಕ ಕರ್ನಾಳ, ಮುಖ್ಯ ಕಾರ್ಯನಿರ್ವಾಹಕ ಸಿದ್ದಪ್ಪ ಕಬ್ಬೇರ, ಕ್ಷೇತ್ರ ಅಧಿಕಾರಿ ಪ್ರೇಮಕುಮಾರನಾಯಕ, ಕ್ಯಾಷಯಿರ್ ಆಶಿಫ್ ಕರ್ನಲು , ಸಿಬ್ಬಂದಿಬಾಷಸಾಬ ಡಕಣಿ ಮುಂತಾದವರು ಉಪಸ್ಥಿತರಿದ್ದರು.

## ಬೈಕ್ ಕಳ್ಳರ ಬಂಧನ: 14 ಬೈಕ್ ಜಪ್ತಿ

**ಕಲಬುರಗಿ,ಜ.2**–ಐಷಾರಾಮಿ ಬೈಕ್‌ಗಳನ್ನು ಗುರಿಯಾಗಿಸಿ ಕೊಂಡು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಮಾಡಬೂಳ ಠಾಣೆ ಪೊಲೀಸರು ಬಂಧಿಸಿದ್ದಾರೆ.ಚಿಂಚೋಳಿ ತಾಲ್ಲೂಕಿನ ಪಸ್ತಾಪೂರ ಗ್ರಾಮದ ನಾಗೇಶ ತಂದೆ ರಾಜಪ್ಪ ಹಲಗೆನೂರ ಮತ್ತು ಜೇವರ್ಗಿ ತಾಲ್ಲೂಕಿನ ರಾಮಪೂರ ಗ್ರಾಮದ ಗೌಡಪ್ಪ ತಂದೆ ಶರಣಪ್ಪ ಕಕ್ಕಸಗೇರಾ ಎಂಬುವವರನ್ನು ಬಂಧಿಸಿ 12.5 ಲಕ್ಷ ರೂ.ಮೌಲ್ಯದ 14 ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ. ಮಾಡಬೂಳ ಪೊಲೀಸ್ ಠಾಣೆ ವ್ಯಾಪ್ತಿಯ ಹಳೆ ಹೆಬ್ಬಾಳ ಗ್ರಾಮದಲ್ಲಿ ಬೈಕ್ ಕಳ್ಳತನವಾದ ಬಗ್ಗೆ ಬಸವರಾಜ ಅಂಕಲಗಿ ಅವರು ದೂರು ಸಲ್ಲಿಸಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಬೈಕ್ ಕಳ್ಳರ ಪತ್ತೆಗೆ ಶಹಾಬಾದ ಉಪ ವಿಭಾಗದ ಡಿಎಸ್‌ಪಿ ಶಂಕರಗೌಡ ಪಾಟೀಲ ಅವರ ಮಾರ್ಗದರ್ಶನದಲ್ಲಿ ಕಾಳಗಿ ಸಿಪಿಐ ಜಗದೇವಪ್ಪ ಪಾಳಾ ಅವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಸಿದ್ದಲಿಂಗ, ಗೌತಮ, ತಿಪ್ಪಯ್ಯ, ಸಿಡಿಆರ್ ಘಟಕದ ಸಿಬ್ಬಂದಿಗಳಾದ ಬಲರಾಮ, ಹಣಮಂತ, ಮಾಡಬೂಳ ಠಾಣೆ ಸಿಬ್ಬಂದಿಗಳಾದ ವೀರಶೆಟ್ಟಿ, ಪ್ರಶಾಂತ, ಮಾಳಗೊಂಡ, ರಮೇಶ, ಅಶೋಕ, ಶಾಂತಮಲ್ಲಪ್ಪ, ಚಂದ್ರಶೇಖರ, ಸಂಗಣ್ಣ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಬೈಕ್ ಕಳ್ಳರನ್ನು ಬಂಧಿಸಿ ಬೈಕ್‌ಗಳನ್ನು ಜಪ್ತಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದೆ. ಬೈಕ್ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

## ಇಂದು ವಾಲ್ಮೀಕಿ ಪುತ್ಥಳಿ ಅನಾವರಣ


**ಬಳ್ಳಾರಿ, ಜ.02:** ಇಂದು ನಗರದ ವಾಲ್ಮೀಕಿ ಸರ್ಕಲ್ ನಲ್ಲಿ ವಾಲ್ಮೀಕಿ ಪುತ್ತಳಿ ಅನಾವರಣ ಕಾರ್ಯಕ್ರಮ ಇದೆ. ಅದಕ್ಕಾಗಿ ಸರ್ಕಲ್ ಸಂಪರ್ಕಿಸುವ ರಸ್ತೆಗಳು ಕೇಸರಿ ಮಯವಾಗಿವೆ.ಎಲ್ಲೇಡೆ ರಾಮ ಹುನಮನ ಬ್ಯಾನರ್ ಗಳು ಸೇರಿದಂತೆ ವಾಲ್ಮೀಕಿ ಶಾಸಕ ಸಚಿವ ಬ್ಯಾನರ್ ರಾರಾಜಿಸುತ್ತಿವೆ.ಅದ್ರೇ ನಿನ್ನೆ ನಡೆದ ಬ್ಯಾನರ್ ಗಲಾಟೆ ಇಡೀ ಕಾರ್ಯಕ್ರಮಕ್ಕೆ ಸಣ್ಣದೊಂದು ಕಪ್ಪು ಚುಕ್ಕೆಯಾಗಿದೆ. ಜನಾರ್ದನ ರೆಡ್ಡಿ ಮನೆಗೆ ಕೇವಲ ಅರ್ಧ ಕಿ.ಮೀ. ದೂರದಲ್ಲಿರೋ ವೃತ್ತದಲ್ಲಿ ಅರುಣ್ ಯೋಗಿರಾಜ್ ಕೈಯಲ್ಲಿ ಮೂಡಿದ ಮೂರ್ತಿ ಇದೆ.



ಯುವ ಮಾರ್ಗ

www.yuvamarga.com Yuva Marga yuva_marga_

# ನವಲಕಲ್ ಅಭಿನವ್ ಶ್ರೀಗಳಿಂದ ಈ ನಮ್ಮ ಕನ್ನಡ ನಾಡು ಪತ್ರಿಕೆಯ 2026 ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ



ಯುವಮಾರ್ಗ ಸುದ್ದಿ

**ಸಿರವಾರ, ಜ.02**–ಈ ನಮ್ಮ ಕನ್ನಡ ನಾಡು ಕನ್ನಡ ದಿನಪತ್ರಿಕೆಯ 2026 ನೇ ನೂತನ ವರ್ಷದ ಕ್ಯಾಲೆಂಡರನ್ನು ನವಲಕಲ್ ಬೃಹನ್ಮಠದ ಪೀಠಾಧಿ ಪತಿಗಳಾದ ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಬಿಡುಗಡೆಗೊಳಿಸಿದರು.

ಶ್ರೀಗಳು ಮಾತನಾಡಿ ಪತ್ರಿಕೆ ರಂಗವು ಒಂದು ಜವಬ್ದಾರಿಯುತ ಕಾರ್ಯವಾಗಿದ್ದು. ಸಮಾಜದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತದೆ. ಸಮಾಜದಲ್ಲಿ ಪತ್ರಿಕೆ ರಂಗವು ಒಂದು ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿದೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಒಂದು ಶಕ್ತಿಯಾಗಿದೆ. "ಈ ನಮ್ಮ ಕನ್ನಡ ನಾಡು ಪತ್ರಿಕೆಯು ತನ್ನದೇ ಆದ ಅಸ್ಮಿತೆಯನ್ನು ಹೊಂದಿದೆ. ಈ ಪತ್ರಿಕೆಯು ಉನ್ನತ ಮಟ್ಟದಲ್ಲಿ ಬೆಳೆದು ಸಮಾಜಕ್ಕೆ ಬೆಳಕಾಗಿ ಕಾರ್ಯ ನಿರ್ವಹಿಸಲಿ. ಹೊಸ ವರ್ಷವೂ ಪತ್ರಿಕೆಯ ಕ್ಯಾಲೆಂಡರ್ ಪತ್ರಿಕೆ ಓದುಗರಿಗೆ ಸಹಾಯವಾಗಲಿ. ನಾಡಿನ ಜನತೆಗೆ ಈ ಹೊಸ ವರ್ಷವು ಎಲ್ಲಾರಿಗೂ ಬೆಳಕಾಗಲಿ ಎಂದರು.

ಈ ಸಂದರ್ಭದಲ್ಲಿ ಈ ನಮ್ಮ ಕನ್ನಡ ನಾಡು ದಿನಪತ್ರಿಕೆಯ ತಾಲೂಕು ಪತ್ರಕರ್ತ ಹಾಗೂ ತಾಲೂಕು ಕಾರ್ಯಕರಣಿ ಸಮಿತಿ ಸದಸ್ಯ ಎಸ್.ವಿಜಯಕುಮಾರ ಸಿರವಾರ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಸಮಿತಿ ಸದಸ್ಯ ಎಂ.ಗುಂಡಪ್ಪ, ಸಿರವಾರ ತಾಲೂಕು ಅಧ್ಯಕ್ಷ ಹನುಮೇಶ ಸಿ, ಪ್ರಧಾನ ಕಾರ್ಯದರ್ಶಿ ನಾಗರಾಜ ಕರಿಬಿಲ್ಕರ್, ರಾಯಚೂರು ಬೆಳಕು ದಿನಪತ್ರಿಕೆಯ ಸಂಪಾದಕರಾದ ಮಲ್ಲಿಕಾರ್ಜುನ ಅತ್ತನೂರು, ತಾಲೂಕು ಕಾರ್ಯಕರಣಿ ಸಮಿತಿ ಸದಸ್ಯ ವಿಜಯ ಮಾಚನೂರು, ಜೆಡಿಎಸ್ ಎಸ್ಸಿ ಘಟಕದ ತಾಲೂಕು ಅಧ್ಯಕ್ಷ ರಾಮು ಗಿಂಡಿ, ಅಂಬು ಯಶ್ ಸೇರಿದಂತೆ ಅನೇಕರು ಇದ್ದರು.

# ದಂತ ಸುರಕ್ಷ ಯೋಜನೆ : ಡಾ.ಜಗನ್ನಾಥ

ಯುವಮಾರ್ಗ ಸುದ್ದಿ




**ಲಿಂಗಸುಗೂರು,ಜ.2**– ಜಿಲ್ಲೆಯ ಹಾಗೂ ತಾಲೂಕಿನ ಜನತೆಗಾಗಿ ಸೋಹನ್ ಕುಮಾರ್ ಹಲ್ಲಿನ ದವಖಾನೆ ವತಿಯಿಂದ ಕೇವಲ 3999 ರೂ.ಗಳಲ್ಲಿ ದಂತ ಸುರಕ್ಷ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಖ್ಯಾತ ದಂತ ವೈದ್ಯ ಡಾ. ಜಗನ್ನಾಥ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 3999 ರೂ. ಪಾವತಿಸಿ ನೊಂದಾಯಿಸಿ ಕಾರ್ಡ್ ಪಡೆದರೆ 10 ವರ್ಷಗಳವರೆಗೆ ತಪಾಸಣೆ, ಹಲ್ಲು ಕೀಳುವುದು, ಕೃತಕ ಹಲ್ಲು ಜೋಡಣೆ, ಸೆರಾಮಿಕ್ ಹಲ್ಲು, ಲೋಹದ ಹಲ್ಲು, ರೂಟ್ ಕ್ಯಾನಲ್ ಚಿಕಿತ್ಸೆ, ಸಿಮೆಂಟ್, ಕಂಪೂಜೀಟ್ ಸಿಮೆಂಟ್ ಸೇರಿ ಎಲ್ಲಾ ಸೇವೆಗಳು ಉಚಿತವಾಗಿರುತ್ತವೆ. ಈ ಯೋಜನೆ ಸೀಮಿತ ಅವಧಿಗೆ ಮಾತ್ರ ಬೇಗನೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕೆಂದರು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9731146307ಸಂಪರ್ಕಿಸಲು ಕೋರಿದ್ದಾರೆ.

# ನೆರಳು ಹಿರಿಯರ ಮನೆಯಲ್ಲಿ ಮಾದರಿಯಾಗಿ ವರ್ಷಚಾರಣೆ ನಡೆಸಿದ ಯುವಕರು

ಯುವಮಾರ್ಗ ಸುದ್ದಿ



**ಮಾನ್ವಿ,ಜ.2**–ಪಟ್ಟಣದ ನೆರಳುಹಿರಿಯರ ಮನೆಯಲ್ಲಿ ಆಹಾರ ಧಾನ್ಯಗಳನ್ನು ಹಾಗೂ ಹಣ್ಣುಗಳನ್ನು ಅಲ್ಲಿನ ಹಿರಿಯ ನಾಗರಿಕರಿಗೆ ನೀಡುವುದರ ಮೂಲಕ ನೂತನ 2026 ವರ್ಷಚಾರಣೆಯನ್ನು

ಮಹೇಂದ್ರ,ರಾಜೇಂದ್ರ ಸಿಂಗ್,ರವಿ ರಂಜನ್, ಪ್ರೀತಮ್ಮ ಸಾಗರ್, ರಾಘುನಾಯಕ ಸಾದಪುರ್ ಇತರರಿಗೆ ಮಾದರಿಯಾಗಿ ಆಚರಿಸಿಕೊಂಡು ಮಾತನಾಡಿ ಹೊಸ ವರ್ಷಚಾರಣೆಯ ಹೆಸರಿನಲ್ಲಿ ಮೋಜು ಮಸ್ತಿ ಮಾಡುವುದಕ್ಕೆ ಯುವಕರು ಹೆಚ್ಚಿನ ಮೋತ್ತವನ್ನು ಹಾಳು ಮಾಡುತ್ತಾರೆ. ಅದೇ ಹಣವನ್ನು ಇಂತಹ ಆನಾಥಶ್ರಮಗಳಿಗೆ ನೀಡುವ ಮೂಲಕ ಇಲ್ಲಿರುವ ವೃದ್ದರು,ಆನಾಥರು ಕೂಡ ಸಂತೋಷವಾಗಿರುವಂತೆ ನೋಡಿಕೊಂಡಾತಗುತ್ತದೆ ಎಂದು ತಿಳಿಸಿದರು. ಮಹೇಂದ್ರ, ರಾಜೇಂದ್ರ ಸಿಂಗ್,ರವಿ ರಂಜನ್, ಪ್ರೀತಮ್ಮ ಸಾಗರ, ರಾಘುನಾಯಕ ಸಾದಪುರ್ ಇದ್ದರು

# ಪ್ರಾಣಿ ಹತ್ಯೆ ನಿಷೇಧ ಕಾಯ್ದೆ: ಉಲ್ಲಂಘಿಸಿ ಅಂಬಾಮಠದಲ್ಲಿ ಪ್ರಾಣಿ ಹತ್ಯೆ ನಡೆದರೆ ನ್ಯಾಯಾಂಗ ನಿಂದನೆ – ದಯಾನಂದ ಸ್ವಾಮೀಜಿ

ಯುವಮಾರ್ಗ ಸುದ್ದಿ



**ರಾಯಚೂರು,ಜ.2**–ಜಿಲ್ಲೆಯ ಸಿಂಧನೂರು ತಾಲೂಕಿನ ಅಂಬಾಮಠ ಸೇರಿದಂತೆ ಜಿಲ್ಲೆಯಲ್ಲಿ ನಡೆಯುವ ಪ್ರಾಣಿಹತ್ಯೆಯನ್ನು ಸಂಪೂರ್ಣ ನಿರ್ಬಂಧಿಸಬೇಕೆಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯ ದಯಾನಂದ ಸ್ವಾಮೀಜಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಜ.3 ರಿಂದ 7 ವರೆಗೆ ಸೋಮಲಾಪುರ ಗ್ರಾಮದಲ್ಲಿರುವ ಅಂಬಾಮಠ ದೇವಸ್ಥಾನವೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಒಳಪಟ್ಟಿದೆ. ಪ್ರಾಣಿ ಹತ್ಯೆ ನಿಷೇಧಿಸಿ 1959 ರಲ್ಲಿಉಚ್ಚ ನ್ಯಾಯಾಲಯ ಆದೇಶಿಸಿದೆ. ಉಲ್ಲಂಘನೆಯಾದಲ್ಲಿ ಜಿಲ್ಲಾ ಮತ್ತು ತಾಲೂಕ ಆಡಳಿತಗಳು ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

2016 ರಿಂದ 2019 ರಲ್ಲಿ 8 ಹೆಚ್ಚು ಪ್ರಕರಣಗಳಲ್ಲಿ ಹೈಕೋರ್ಟ ಆದೇಶಗಳಿವೆ.ಪ್ರಾಣಿ ಜೀವ ರಕ್ಷಣೆಗೆ ಜಾಗೃತಿ ಕೈಗೊಳ್ಳಲಾಗುತ್ತಿದೆ. ಉಲ್ಲಂಘನೆಯಾದಲ್ಲಿ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಎಚ್ಚರಿಸಿದರು.

# ಜುಲಮಗೇರಾ : ಸಿಸಿ ರಸ್ತೆ ಕಾಮಗಾರಿಗೆ ದದ್ದಲ್ ಚಾಲನೆ

ಯುವಮಾರ್ಗ ಸುದ್ದಿ



**ರಾಯಚೂರು,ಜ.2**– ತಾಲೂಕಿನ ಜುಲಮಗೇರಾ ಗ್ರಾಮದಲ್ಲಿ ಇಂದು ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಬಸನಗೌಡ ದದ್ದಲ್ ಭೂಮಿ ಪೂಜೆ ಮಾಡಿ ಚಾಲನೆ ನೀಡಿದರು.

ಜುಲಮಗೇರಾ ಗ್ರಾಮದಲ್ಲಿ ಕೆಕೆಆರ್‌ಡಿಬಿಯ ಮೈಕ್ರೋ ಯೋಜನೆಯಡಿಯ ಎಸ್‌ಸಿ ಕಾಲೋನಿಯಲ್ಲಿ ಸಿಸಿ ರಸ್ತೆ ಕಾಮಗಾರಿಗೆಶಾಸಕ ಬಸನಗೌಡ ದದ್ದಲ್, ಎಂಎಲ್ ಸಿ ಎ.ವಸಂತಕುಮಾರ ಚಾಲನೆ ನೀಡಿದರು. ಇದೆ ವೇಳೆ ಮುಖಂಡರು, ಕಾರ್ಯಕರ್ತರು ಶಾಸಕರಿಬ್ಬರನ್ನೂ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಗಿಲ್ಲೇಸೂಗುರ ಬ್ಲಾಕ್ ಅಧ್ಯಕ್ಷರುಗಳು, ಊರಿನ ಹಿರಿಯ ಮುಖಂಡರುಗಳು ಸುತ್ತಮುತ್ತಲಿನ ಗ್ರಾಮಗಳ ಹಿರಿಯ ಮುಖಂಡರುಗಳು, ನಾಮನಿರ್ದೇಶನ ಸದಸ್ಯರುಗಳು, ಅಧಿ ಕಾರಿಗಳು ಗ್ರಾ. ಪಂ, ಸದಸ್ಯರುಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಜನವರಿ 3, 4ರಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ರಾಯಚೂರು ಜ,2**– ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು 2026ರ ಜನವರಿ 3 ಹಾಗೂ 4ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಜನವರಿ 3ರಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಹೆಚ್ಎಎಲ್ ವಿಮಾನ ನಿಲ್ದಾಣದಿಂದ ನಿರ್ಗಮಿಸಿ, ಬಳ್ಳಾರಿ ಜಿಲ್ಲೆಯ ಜಿಂದಾಲ್ ಏರಸ್ಟ್ರಿಪಗೆ 12.50ಕ್ಕೆ ಆಗಮಿಸುವರು. ಜಿಂದಾಲನಿಂದ 1.30ಕ್ಕೆ ಹೊರಟು 2 ಗಂಟೆಗೆ ಸಿಂಧನೂರಿನ ಸರ್ಕ್ಯೂಟ್ ಹೌಸ್ ಹತ್ತಿರದ ಹೆಲಿಪ್ಯಾಡಗೆ ಆಗಮಿಸುವರು. ಮಧ್ಯಾಹ್ನ 2 ಗಂಟೆಗೆ ಮುಖ್ಯಮಂತ್ರಿಗಳೊಂದಿಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಭಾಗವಹಿಸುವರು.ಬಳಿಕ ಮಧ್ಯಾಹ್ನ 3.30ಕ್ಕೆ ಸಿಂಧನೂರು ತಾಲೂಕಿನ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠ ಆವರಣದಲ್ಲಿ

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಶ್ರೀ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಸಂಯುಕ್ತಾಶ್ರಯದಲ್ಲಿ ಶ್ರೀ ಅಂಬಾ ಮಹೋತ್ಸವ–2026ರ ಜಾತ್ರಾ ಮಹೋತ್ಸವ ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳೊಂದಿಗೆ ಭಾಗವಹಿಸಲಿದ್ದಾರೆ.

ಸಂಜೆ 6 ಗಂಟೆಗೆ ಜಿಲ್ಲೆಯ ಲಿಂಗಸುಗೂರಿನಲ್ಲಿ ತಾಲೂಕಿನ ವೀರಶೈವ ವಿದ್ಯಾವರ್ಧಕ ಸಂಘದಿಂದ ಏರ್ಪಡಿಸಲಾದ ಬೆಳ್ಳಿ ಸಂಭ್ರಮ–2026ರ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ಬಳಿಕ ರಾಯಚೂರು ನಗರಕ್ಕೆ ಆಗಮಿಸಿ ರಾಯಚೂರಿನಲ್ಲಿ ವಾಸ್ತವ್ಯ ಮಾಡುವರು.ಜನವರಿ 4ರ ಬೆಳಿಗ್ಗೆ 9 ಗಂಟೆಗೆ ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯಚೂರು ಉತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಕ್ರಿಕೇಟ್ ಟೂರ್ನಮೆಂಟ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 10 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಉತ್ಸವ ಕುರಿತು ಜನಪ್ರತಿನಿಧಿಗಳೊಂದಿಗೆ ಪೂರ್ವಭಾವಿ ಸಭೆ ಮತ್ತು ಲೋಗೊ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ನಗರದ ಸಿಯಾತಲಾಬ್ ನಗರದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂದಾಜು ಮೊತ್ತ 16.60 ಕೋಟಿ ರೂ.ವೆಚ್ಚದಲ್ಲಿ ಕೈಗೊಳ್ಳುತ್ತಿರುವ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗಳ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಮಧ್ಯಾಹ್ನ 1 ಗಂಟೆಗೆ ನಗರದ ಓಪೆಕ್ ಆಸ್ಪತೆಯಲ್ಲಿ ಕಿದ್ವಾಯಿ ಕ್ಯಾನ್ಸರ್ ಸೆಂಟರ್ ಕಟ್ಟಡದ ಗುದ್ದಲಿ ಪೂಜೆ ಮತ್ತು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಿ.ಎಸ್ಸಿ. ನರ್ಸಿಂಗ್ ವಿದ್ಯಾರ್ಥಿನಿಯರ ವಸತಿ ನಿಲಯದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಮಧ್ಯಾಹ್ನ 3 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ರಸ್ತೆ ಮಾರ್ಗವಾಗಿ ಕಲಬುರಗಿ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳಾದ ಕೃಷ್ಣಗೌಡ ತಾಯಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಲೋಕೋಪಯೋಗಿ ಸಚಿವರ ಪ್ರವಾಸ

**ರಾಯಚೂರು ಜ,2**– ಲೋಕೋಪಯೋಗಿ ಸಚಿವರು ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಅವರು ಇಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮಧ್ಯಾಹ್ನ 12.30ಕ್ಕೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ಸಿಟಿ ಮುನಿಸಿಪಲ್ ಗ್ರೌಂಡ್ ಹೆಲಿಪ್ಯಾಡನಿಂದ ವಿಶೇಷ ಹೆಲಿಕ್ಯಾಪ್ಟರ್ ಮೂಲಕ ಹೊರಟು ಮಧ್ಯಾಹ್ನ 3.30ಕ್ಕೆ ಸಿಂಧನೂರಿನ ಜೂನಿಯರ್ ಕಾಲೇಜ್ ಕ್ರೀಡಾಂಗಣದಲ್ಲಿನ ಹೆಲಿಪ್ಯಾಡಗೆ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ಸಿಂಧನೂರು ತಾಲೂಕಿನ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠ ಆವರಣದಲ್ಲಿ ನಡೆಯುವ ಶ್ರೀ ಅಂಬಾದೇವಿಯ ಅಂಬಾರಿ ರಥೋತ್ಸವ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಎನ್.ರಾಜಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನವರಿ 4ರಂದು ಸಚಿವರಾದ ಎನ್.ಎಸ್.ಬೋಸರಾಜು ಪ್ರವಾಸ

**ರಾಯಚೂರು ಜ,2**– ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು 2026ರ ಜನವರಿ 4 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಉತ್ಸವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಪೂರ್ವಭಾವಿ ಸಭೆ ಮತ್ತು ಲೋಗೊ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ನಗರದ ಸಿಯಾತಲಾಬ್ ನಗರದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂದಾಜು ಮೊತ್ತ 16.60 ಕೋಟಿ ರೂ.ವೆಚ್ಚದಲ್ಲಿ ಕೈಗೊಳ್ಳುತ್ತಿರುವ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗಳ ಗುದ್ದಲಿ ಪೂಜೆ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಭಾಗವಹಿಸುವರು.

ಮಧ್ಯಾಹ್ನ 1 ಗಂಟೆಗೆ ಕಿದ್ವಾಯಿ ಕ್ಯಾನ್ಸರ್ ಸೆಂಟರ್ ಕಟ್ಟಡದ ಗುದ್ದಲಿ ಪೂಜೆ ಮತ್ತು ರಿಮ್ಸ್ ಸಂಸ್ಥೆಯ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿನಿಯರ ವಸತಿ ನಿಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಭಾಗವಹಿಸುವರು. ಬಳಿಕ ವಿವಿಧ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ರಾತ್ರಿ 11 ಗಂಟೆಗೆ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ವೀರಭದ್ರ ಹಂಚಿನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶೈಕ್ಷಣಿಕ ಪ್ರೋತ್ಸಾಹ ಧನಕ್ಕೆ ಮಕ್ಕಳಿಂದ ಅರ್ಜಿ ಆಹ್ವಾನ

**ರಾಯಚೂರು ಜ,2**–ಪ್ರಾಯೋಜಕತ್ವ ಯೋಜನೆಯ ಮಾರ್ಗಸೂಚಿಯನ್ವಯ ಶೈಕ್ಷಣಿಕ ಪ್ರೋತ್ಸಾಹ ಧನ ಪಡೆಯಲು ಅರ್ಹ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.ಬಾಲಕ/ಬಾಲಕಿಯರು 18 ವರ್ಷದೊಳಗಿನವರಾಗಿರಬೇಕು. ವಾರ್ಷಿಕ ಆದಾಯ ನಗರ ಪ್ರದೇಶ ರೂ.96,000 ಗ್ರಾಮೀಣ ಪ್ರದೇಶದಲ್ಲಿ ರೂ.72,000 ಮೀರಿರಬಾರದು. ತಾಯಿ ಒಬ್ಬರೇ ಇರುವ/ವಿಧವೆ ಮಕ್ಕಳು, ಮಕ್ಕಳು ಅನಾಥವಾಗಿದ್ದರೆ ಹಾಗೂ ವಿಸ್ತೃತ ಕುಟುಂಬದೊಂದಿಗೆ ವಾಸಿಸುತ್ತಿದ್ದರೆ ಹಾಗೂ ಕುಷ್ಠರೋಗ/ಹೆಚ್‌ಐವಿ ಸೋಂಕಿತ ಪೋಷಕರ ಮಕ್ಕಳು ಮತ್ತು ಕುಟುಂಬಕ್ಕೆ ಆಧಾರವಾಗಿದ್ದ ಪೋಷಕರು ಜೈಲಿನಲ್ಲಿದ್ದರೆ(ಸಜೆಯಾಗಿದ್ದರೆ) ಅಂತಹ ಕುಟುಂಬದ ಮಕ್ಕಳು ಹಾಗೂ ಸತತವಾಗಿ 6 ತಿಂಗಳವರೆಗೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಆಶ್ರಯ ಪಡೆದಿರುವ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ.ಮಗುವಿನ 2 ಭಾವಚಿತ್ರಗಳು, ತಂದೆ/ತಾಯಿ ಮರಣ ಪ್ರಮಾಣ ಪತ್ರ, ಮಗುವಿನ ಶಾಲಾ ದೃಢೀಕರಣ ಪ್ರಮಾಣ ಪತ್ರ, ಮಗುವಿನ ಆಧಾರ ಕಾರ್ಡ್, ಮಗುವಿನ ಬ್ಯಾಂಕ್ ಖಾತೆ ಪುಸ್ತಕ, ತಾಯಿ/ಪೋಷಕರ ಆಧಾರ ಕಾರ್ಡ್, ಪಡಿತರ (ರೇಶನ್) ಕಾರ್ಡ್, ಮಗುವಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಅರ್ಜಿ ಜೊತೆಗೆ ಸಲ್ಲಿಸಬೇಕು. ಆಯಾ ತಾಲೂಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ತಾಲೂಕು ಮಕ್ಕಳ ರಕ್ಷಣಾಧಿಕಾರಿಗಳ, ಕಾರ್ಯಾಲಯ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಲಯ, ಆಜಾದನಗರ, ರಾಯಚೂರುನಲ್ಲಿ ದಿನಾಂಕ 16-01-2026ರೊಳಗಾಗಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ–08532–226226ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H